# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಸೆಪ್ಟೆಂಬರ್ 27, 2021

ಸಂಪುಟ : 48 ಸಂಚಿಕೆ : 137 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com






**ಗೆಲುವಿನತ್ತ ನಡಿಗೆ...** ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಪ್ರಯುಕ್ತ ನಗರದ ಬಾಪೂಜಿ ಪ್ರೌಢಶಾಲೆ ಆವರಣದಲ್ಲಿ ಭಾನುವಾರ ನಡೆದ ಹಿರಿಯ ನಾಗರಿಕರ ಕ್ರೀಡಾ ಸ್ಪರ್ಧೆಗಳಲ್ಲಿ ವೇಗದ ನಡಿಗೆ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಹಿರಿಯ ನಾಗರಿಕರು.

## ನ್ಯಾಯ ಬಲ ಇಲ್ಲದೇ ತಿರುಪತಿ ತಿಮ್ಮಪ್ಪನೂ ದೇಶ ಬದಲಿಸಲಾರ

### ದೇಶದ ಯಾವುದೇ ಸರ್ಕಾರ ಸುಭದ್ರ, ನಿಷ್ಪಕ್ಷಪಾತ, ಸ್ವತಂತ್ರ ನ್ಯಾಯಾಡಳಿತ ಒದಗಿಸದ ಕಾರಣ 70 ವರ್ಷಗಳಾದರೂ ದೇಶ ಮುಂದುವರೆದಿಲ್ಲ : ಬಿದರಿ

ದಾವಣಗೆರೆ, ಸೆ. 26 – ಆಡಳಿತದ ಚುಕ್ಕಾಣಿ ಹಿಡಿದಿರುವವರು ಸುಭದ್ರ, ನಿಷ್ಪಕ್ಷಪಾತ ಹಾಗೂ ಸ್ವತಂತ್ರ ನ್ಯಾಯಾಡಳಿತ ಒದಗಿಸಲು ಸಾಧ್ಯವಾಗದೇ ದೇಶ ಮುಂದುವರೆದಿಲ್ಲ ಎಂದಿರುವ ನಿವೃತ್ತ ಡಿಜಿಪಿ ಡಾ. ಶಂಕರ ಮಹಾದೇವ ಬಿದರಿ, ನ್ಯಾಯಾಡಳಿತ ವ್ಯವಸ್ಥೆ ಬದಲಾಗದಿದ್ದರೆ ದೇವರೇ ಬಂದು ಪ್ರಧಾನ ಮಂತ್ರಿಯಾದರೂ ದೇಶ ಬದಲಾಗುವುದಿಲ್ಲ ಎಂದಿದ್ದಾರೆ.

ಜಿಲ್ಲಾ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಅರುಣ ಟಾಕೀಸ್ ಸರ್ಕಲ್‌ನಲ್ಲಿನ ಹಳೇ ಡಿ.ಎ.ಆರ್. ಕಚೇರಿ ಹಿಂಭಾಗ ನಿರ್ಮಿಸಲಾಗಿರುವ ಜಿಲ್ಲಾ ನಿವೃತ್ತ ಪೊಲೀಸ್ ಅಧಿಕಾರಿಗಳ ಭವನ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ತೃಣಮೂಲ ಕಾಂಗ್ರೆಸ್, ಕಾಂಗ್ರೆಸ್, ಬಿಜೆಪಿ ಸೇರಿದಂತೆ, ಎಲ್ಲ ಪಕ್ಷಗಳ ಸರ್ಕಾರ ಬಂದರೂ ನ್ಯಾಯದಾನ ವ್ಯವಸ್ಥೆ ಬಲಿಷ್ಠ ಮಾಡಲು ಹಸ್ತಕ್ಷೇಪ ಇಲ್ಲದ ನಿಷ್ಪಕ್ಷಪಾತ ಪೊಲೀಸ್ ವ್ಯವಸ್ಥೆ ರೂಪಿಸುತ್ತಿಲ್ಲ ಎಂದವರು ವಿಷಾದಿಸಿದ್ದಾರೆ.

ತಪ್ಪು ಮಾಡಿದವರಿಗೆ ಒಂದೆರಡು ವರ್ಷಗಳಲ್ಲಿ ಶಿಕ್ಷೆಯಾಬೇಕು. ಆದರೆ, ದೇಶದಲ್ಲಿ ಸೈಕಲ್ ಕದ್ದವನಿಗೆ ಶಿಕ್ಷೆ ಆಗುತ್ತಿದೆ. ದೊಡ್ಡ ಹಗರಣ ಮಾಡಿದವರಿಗೆ ಶಿಕ್ಷೆ ಆಗುತ್ತಿಲ್ಲ. ಈ ರೀತಿಯ ಕಾನೂನು ವ್ಯವಸ್ಥೆ ಇರುವವರೆಗೂ ತಿರುಪತಿ ತಿಮ್ಮಪ್ಪ, ಶ್ರೀಶೈಲ ಮಲ್ಲಿಕಾರ್ಜುನ, ಕಾಶಿ ವಿಶ್ವನಾಥ, ಕೇದಾರನಾಥ, ಬದರೀನಾಥ ಬಂದು ಪ್ರಧಾನ ಮಂತ್ರಿ ಆದರೂ ದೇಶ ಬದಲಾಗಲ್ಲ ಎಂದವರು ನೇರವಾಗಿ ಹೇಳಿದ್ದಾರೆ.

ಅಮರಿಕ ಹಾಗೂ ಬ್ರಿಟನ್ ಸೇರಿದಂತೆ ಪ್ರಗತಿ ಹೊಂದಿದ ದೇಶಗಳಲ್ಲಿ ಪೊಲೀಸ್ ಕೆಲಸದಲ್ಲಿ ಬೇರೆಯವರು ಕೈ ಹಾಕುವುದಿಲ್ಲ. ಭಾರತದಲ್ಲೂ ಸುಭದ್ರ, ನಿಷ್ಪಕ್ಷಪಾತ, ಸ್ವತಂತ್ರ ನ್ಯಾಯಾಡಳಿತ ಮಾಡಲು ಸಾಧ್ಯವಾಗಬೇಕಿದೆ. ಪೊಲೀಸ್, ಪ್ರಾಸಿಕ್ಯೂಷನ್, ನ್ಯಾಯಾಂಗ ಹಾಗೂ ಬಂಧೀಖಾನೆ (2ನೇ ಪುಟಕ್ಕೆ)

### ಪೊಲೀಸ್ ಪೋಸ್ಟಿಂಗ್‌ಗೆ ಕೋಟಿಗಳ ಹಣ

**ಪೊಲೀಸ್ ಅಧಿಕಾರಿಗಳಿಗೆ ವರ್ಷದ ಅವಧಿಗೆ ಹುದ್ದೆ ನೀಡಲಾಗುತ್ತಿದೆ. ಹೀಗಾದರೆ ಕೆಲಸ ಮಾಡುವುದು ಹೇಗೆ? ಈ ವರ್ಗಾವಣೆಗೂ ಕೋಟಿಗಟ್ಟಲೇ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಶಂಕರ್ ಬಿದರಿ ಹೇಳಿದರು.**

**ರಾಜಕಾರಣಿಗಳು ಭ್ರಷ್ಟಾಚಾರ ಮಾಡುವುದರಿಂದ, ಪೋಸ್ಟಿಂಗ್‌ಗಾಗಿ ಪೊಲೀಸರು ಹಣ ನೀಡುವ ಪರಿಸ್ಥಿತಿ ಬಂದಿದೆ. ಇಂತಹ ಮೂರ್ಖರ ಕಾರಣದಿಂದ ಹೆಸರು ನಿಮ್ಮದು ಬಸಿರು ಅವರದು ಎಂಬಂತಾಗಿದೆ ಎಂದು ಬಿದರಿ ಕಟುವಾಗಿ ಹೇಳಿದರು.**

**ಬೆಂಗಳೂರಿನಲ್ಲಿ ಒಂದು ಪೋಸ್ಟಿಂಗ್‌ಗೆ 1 ಕೋಟಿ ರೂ.ಗಳವರೆಗೂ ಹಣ ನೀಡಲಾಗುತ್ತಿದೆ. ಬೇರೆ ಕಡೆ 30 ಲಕ್ಷ ರೂ. ಇದ್ದರೂ ಇರಬಹುದು. ಈ ಹಣವೂ ರಾಜಕಾರಣಿಗಳ ಬಳಿ** (2ನೇ ಪುಟಕ್ಕೆ)



## ಹಿರಿಯರು ಕಿರಿಯರಿಗೆ ಸ್ಫೂರ್ತಿ

### ಹಿರಿಯ ಸಿವಿಲ್ ನ್ಯಾಯಾಧೀಶರಾದ ಪ್ರವೀಣ್ ನಾಯಕ್

ದಾವಣಗೆರೆ, ಸೆ. 26- ಹಿರಿಯ ನಾಗರಿಕರು ಯುವಕರು ಹಾಗೂ ಸಮಾಜಕ್ಕೆ ಸ್ಫೂರ್ತಿ ಎಂದು ಹಿರಿಯ ಸಿವಿಲ್ ನ್ಯಾಯಮೂರ್ತಿ ಪ್ರವೀಣ್ ನಾಯಕ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಹಿರಿಯ ನಾಗರಿಕರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಪ್ರಯುಕ್ತ ನಗರದ ಬಾಪೂಜಿ ಶಾಲೆಯಲ್ಲಿ ಭಾನುವಾರ ಏರ್ಪಡಿಸಲಾಗಿದ್ದ ಹಿರಿಯ ನಾಗರಿಕರ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಹಿರಿಯರ ಅನುಭವ ಹಾಗೂ ಅವರ ಮಾರ್ಗದರ್ಶನವನ್ನು ಇಂದಿನ ಯುವಪೀಳಿಗೆ ಸದ್ಬಳಕೆ ಮಾಡಿಕೊಂಡು, ಉತ್ತಮ ಜೀವನ ರೂಪಿಸಿಕೊಳ್ಳಬೇಕೆಂದು ಕರೆ ನೀಡಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಉಚಿತ ಕಾನೂನು ಅರಿವು-ನೆರವು ನೀಡುತ್ತಿದ್ದು, ಹಿರಿಯ ನಾಗರಿಕರ ಯಾವುದೇ ರೀತಿಯ ಕಾನೂನಾತ್ಮಕ ಸಮಸ್ಯೆಗಳ ಪರಿಹಾರಕ್ಕೆ ಪ್ರಾಧಿಕಾರವನ್ನು ಸಂಪರ್ಕಿಸುವಂತೆ (2ನೇ ಪುಟಕ್ಕೆ)

#### ಸ್ಪರ್ಧೆಗಳಲ್ಲಿ ಹಿರಿಯ ನಾಗರಿಕರ ಉತ್ಸಾಹ

**ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ನೋಂದಾಯಿತ 119 ಹಿರಿಯ ನಾಗರಿಕರ ಪೈಕಿ 89 ಜನರು ಭಾಗಿಯಾಗಿದ್ದರು. 60-70, 70-80 ಹಾಗೂ 80 ವರ್ಷ ಮೇಲ್ಪಟ್ಟ ವಯಸ್ಸಿನ ವಿಭಾಗದಲ್ಲಿ ಸ್ಪರ್ಧೆಗಳು ನಡೆದವು. ವಚನಗೀತೆ, ಭಾವಗೀತೆ, ಜನಪದ ಗೀತೆ ಸೇರಿದಂತೆ ಸಂಗೀತ ಸ್ಪರ್ಧೆಗಳು, ಚೆಂಡು ಎಸೆತ, ನಿಧಾನ ನಡುಗೆ, ಕೇರಂ, ಬಾಸ್ಕೆಟ್‌ಗೆ ಚೆಂಡು ಹಾಕುವುದು ಸೇರಿದಂತೆ ವಿವಿಧ ರೀತಿಯ ಕ್ರೀಡಾ ಸ್ಪರ್ಧೆಗಳು ನಡೆದವು. ಜಿಲ್ಲಾ ಮಟ್ಟದ ಸ್ಪರ್ಧೆಗಳಲ್ಲಿ ವಿಜೇತರಾದವರು ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಡಾ.ಕೆ.ಕೆ. ಪ್ರಕಾಶ್ ಮಾಹಿತಿ ನೀಡಿದರು.**

## ಇಂದು ಭಾರತ್ ಬಂದ್

ಬೆಂಗಳೂರು, ಸೆ.26- ಕೃಷಿ ಕಾಯ್ದೆ ತಿದ್ದುಪಡಿ ವಿರೋಧಿಸಿ ರೈತ ಸಂಘಟನೆಗಳು ಇಂದು ಭಾರತ್ ಬಂದ್‌ಗೆ ಕರೆ ಕೊಟ್ಟಿವೆ.

ಸಂಯುಕ್ತ ಕಿಸಾನ್ ಮೋರ್ಚಾ ಈ ಬಂದ್‌ಗೆ ಕರೆ ನೀಡಿದ್ದು, ಕಾಂಗ್ರೆಸ್ ಪಕ್ಷ ಕೂಡಾ ಬೆಂಬಲ ನೀಡಿದೆ. ದೇಶಾದ್ಯಂತ 500ಕ್ಕೂ ಹೆಚ್ಚು ಸಂಘಟನೆಗಳು ಈ ಬಂದ್‌ಗೆ ಬೆಂಬಲ ನೀಡಿವೆ.

ಕರ್ನಾಟಕದಲ್ಲಿ ಬಂದ್‌ಗೆ ಕಾಂಗ್ರೆಸ್ ಪಕ್ಷ, ಕಬ್ಬು ಬೆಳೆಗಾರರ ಸಂಘ, ರೈತ ಸಂಘ ಹಾಗೂ ಹಸಿರು ಸೇನೆ ಸೇರಿದಂತೆ ಹಲವು ರೈತ ಸಂಘಟನೆಗಳು (2ನೇ ಪುಟಕ್ಕೆ)

### ಬಂದ್‌ಗೆ ಕಾಂಗ್ರೆಸ್ ಬೆಂಬಲ

ದಾವಣಗೆರೆ,ಸೆ.26- ರೈತರಿಗೆ ಮರಣ ಶಾಸನವಾಗಿರುವ ಕೃಷಿ ಕಾಯಿದೆಗಳನ್ನು ರದ್ದು ಪಡಿಸಬೇಕು, ಅಡುಗೆ ಅನಿಲ, ಪೆಟ್ರೋಲ್ - ಡೀಸೆಲ್ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ, ಸಂಯುಕ್ತ ಕಿಸಾನ್ ಮೋರ್ಚಾ ಮತ್ತಿತರೆ ಸಂಘಟನೆಗಳ ನೇತೃತ್ವದಲ್ಲಿ ನಾಳೆ ದಿನಾಂಕ 27ರ ಸೋಮವಾರ ಕರೆದಿರುವ ಭಾರತ್ ಬಂದ್‌ಗೆ ಜಿಲ್ಲಾ ಕಾಂಗ್ರೆಸ್ ಬೆಂಬಲ ವ್ಯಕ್ತಪಡಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಮತ್ತು ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅವರು ಪಕ್ಷದ ಎಲ್ಲಾ ಕಾರ್ಯಕರ್ತರು, ಸಾರ್ವಜನಿಕರು ಬಂದ್‌ಗೆ ಸಹಕರಿಸುವಂತೆ ಮನವಿ ಮಾಡಿದ್ದಾರೆ.

## ದುಗ್ಗಮ್ಮ ದೇವಸ್ಥಾನದಲ್ಲಿ ಸಾಂಪ್ರದಾಯಿಕ ದಸರಾ

### ಎಸ್ಸೆಸ್ ಅಧ್ಯಕ್ಷತೆಯಲ್ಲಿನ ಪೂರ್ವಭಾವಿ ಸಭೆಯಲ್ಲಿ ದೇವಸ್ಥಾನದ ಟ್ರಸ್ಟ್ ತೀರ್ಮಾನ

ದಾವಣಗೆರೆ, ಸೆ.26- ಕೋವಿಡ್ ನಿಯಮಾವಳಿ ಅನುಸಾರ ಈ ವರ್ಷ ನಗರದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ಸಾಂಪ್ರದಾಯಿಕ ದಸರಾ ಮಹೋತ್ಸವ ಆಚರಿಸಲು ದೇವಸ್ಥಾನದ ಟ್ರಸ್ಟ್ ತೀರ್ಮಾನಿಸಿತು.

ಇಂದು ದೇವಸ್ಥಾನದ ಪ್ರಸಾದ ನಿಲಯದಲ್ಲಿ ಟ್ರಸ್ಟ್‌ನ ಗೌರವಾಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಸರ್ಕಾರದ ಮಾರ್ಗಸೂಚಿಯಂತೆ ಅಕ್ಟೋಬರ್ 7ರಂದು ದೀಪ ಹಾಕುವ ಕಾರ್ಯಕ್ರಮದೊಂದಿಗೆ ವಿಜೃಂಭಣೆಯ ನವರಾತ್ರಿ ದಸರಾ ಉತ್ಸವಕ್ಕೆ ಚಾಲನೆ ನೀಡಲು ಟ್ರಸ್ಟ್ ನಿರ್ಧರಿಸಿತು.

ಅಕ್ಟೋಬರ್ 7ರಿಂದ ಪ್ರತಿ ದಿನವೂ ಅಭಿಷೇಕ, ವಿಶೇಷ ಅಲಂಕಾರ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಗುವುದು. ಅ.15 ರಂದು ವಿಜಯದಶಮಿ ಆಚರಿಸಲಾಗುವುದು. ಅ.16 ರಂದು ಹಿಂದಿನ ವರ್ಷಗಳಂತೆ ಯಥಾ ಪ್ರಕಾರ ಸಾಮೂಹಿಕ ವಿವಾಹ ನಡೆಸಲಾಗುವುದು. ನವರಾತ್ರಿ ಹಿನ್ನೆಲೆಯಲ್ಲಿ ದೇವಸ್ಥಾನಕ್ಕೆ ವಿದ್ಯುತ್ ಅಲಂಕಾರ ಮಾಡಲು ಸಭೆಯಲ್ಲಿ ಚರ್ಚಿಸಿ ನಿರ್ಧರಿಸಲಾಯಿತು. ಇದಕ್ಕೆ ಗೌರವಾಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಅವರು ಅನುಮತಿಸಿದರಲ್ಲದೇ, ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಸೂಚಿಸಿದರು.



ದೇವಸ್ಥಾನದ ಕಳೆದ ವರ್ಷದ ಲೆಕ್ಕ ಪತ್ರ ಹಾಗೂ ಮಳಿಗೆಗಳ ಕಾಮಗಾರಿ ವಿವರವನ್ನು ಮಂಡಿಸಲಾಯಿತು. ವಾರ್ಷಿಕವಾಗಿ 1.77 ಕೋಟಿ ರೂ. ವೆಚ್ಚವಾಗಿದೆ ಎಂದು ಸದಸ್ಯ ಯಜಮಾನ್ ಮೋತಿ ವೀರಣ್ಣ ಸಭೆಗೆ ವಿವರಿಸಿದರು.

**ದೇವಸ್ಥಾನದ ಮಳಿಗೆಗಳ ನಿರ್ಮಾಣದಲ್ಲಿ ಲೋಪದ ಆರೋಪ:** ದೇವಸ್ಥಾನ ಸಮಿತಿಯ ಹಣದಿಂದ ಶಿವಾಲಿ ಚಿತ್ರಮಂದಿರ ರಸ್ತೆ ಹಾಗೂ ಕೊಂಡಜ್ಜಿ ರಸ್ತೆಯಲ್ಲಿ ನಿರ್ಮಿಸಲಾದ ಒಟ್ಟು 32 ವಾಣಿಜ್ಯ ಮಳಿಗೆಗಳ ನಿರ್ಮಾಣಕ್ಕೆ 3.28 ಕೋಟಿ ರೂ. ನೀಡಿದ್ದು, ಬಳಸಿದ ವೆಚ್ಚದಲ್ಲಿ 80 ಲಕ್ಷ ರೂ. ವ್ಯತ್ಯಾಸವಾಗಲಿದೆ. ಚದರಡಿಗೆ ನಿರ್ದಿಷ್ಟ ವೆಚ್ಚ ನಮೂದಾಗಿದ್ದರೂ 50 ಲಕ್ಷ ರೂ.ಗಳನ್ನು ಕೇವಲ ಜಿಎಸ್‌ಟಿ ಶುಲ್ಕ ನೀಡಲಾಗಿದೆ. (2ನೇ ಪುಟಕ್ಕೆ)

## ಲಸಿಕೆ ಪಡೆಯಲು ಪ್ರಧಾನಿಯೇ ಬರಲಿ ಎಂದ

ಧಾರ್, ಸೆ. 26 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಎದುರಿನಲ್ಲೇ ಕೊರೊನಾ ಲಸಿಕೆ ಪಡೆಯುವುದಾಗಿ, ಲಸಿಕೆಯ ಬಗ್ಗೆ ಹಿಂಜರಿಕೆ ಹೊಂದಿದ್ದ ವ್ಯಕ್ತಿಯೋರ್ವ ಹೇಳುವ ಮೂಲಕ ಮಧ್ಯ ಪ್ರದೇಶದ ಅಧಿಕಾರಿಗಳನ್ನು ತಬ್ಬಿಬ್ಬು ಮಾಡಿದ್ದಾನೆ.

ಶನಿವಾರ ನಡೆದ ಈ ಘಟನೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಮತ್ತೊಮ್ಮೆ ವ್ಯಕ್ತಿಯನ್ನು ಭೇಟಿ ಮಾಡಿ, ಲಸಿಕೆಗೆ ಮನವೊಲಿಸುವು ದಾಗಿ ಅಧಿಕಾರಿಗಳು ಹೇಳಿದ್ದಾರೆ. ಕಿರ್ವಾಸ್ ಎಂಬ ಬುಡಕಟ್ಟು ಹಳ್ಳಿಗೆ ಲಸಿಕೆ ಹಾಕಲು ಅಧಿಕಾರಿಗಳು ತೆರಳಿದ್ದಾಗ ಈ ಘಟನೆ ನಡೆದಿದೆ. ಹಳ್ಳಿಯಲ್ಲಿ ವ್ಯಕ್ತಿ ಹಾಗೂ ಪತ್ನಿ ಹೊರತಾಗಿ ಉಳಿದ ಎಲ್ಲರೂ ಲಸಿಕೆ ಪಡೆದಿದ್ದಾರೆ. ಮತ್ತೊಮ್ಮೆ ಲಸಿಕೆಗೆ ಮನವೊಲಿಸುತ್ತೇವೆ ಎಂದು ಲಸಿಕೆಯ ನೋಡಲ್ ಅಧಿಕಾರಿ ಮನೋಜ್ ದುಬೆ ಹೇಳಿದ್ದಾರೆ.

### 2 ಪಾಸಿಟಿವ್, 3 ಗುಣಮುಖ

ದಾವಣಗೆರೆ, ಸೆ.26- ಚನ್ನಗಿರಿ ಹಾಗೂ ಹೊನ್ನಾಳಿ ತಾಲ್ಲೂಕಿನ ತಲಾ ಒಬ್ಬರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದ್ದು, 3 ಜನರು ಗುಣಮುಖರಾದ ಬಗ್ಗೆ ಜಿಲ್ಲಾಡಳಿತ ಪ್ರಕಟಣೆ ತಿಳಿಸಿದೆ.

## ಜನ್ಮದಿನಕ್ಕೆ ಶುಭಾಶಯ ಸಲ್ಲಿಸಿದ ಎಲ್ಲರಿಗೂ ಕೃತಜ್ಞತೆಗಳು



ದಾವಣಗೆರೆ,ಸೆ.26- 'ನನ್ನ ಜನ್ಮ ದಿನದ ಸಂದರ್ಭದಲ್ಲಿ ಶುಭಾಶಯ ಕೋರಿದ ಪ್ರತಿಯೊಬ್ಬರಿಗೂ ಹೃದಯಪೂ ರ್ವಕ ಕೃತಜ್ಞತೆಗಳು' ಎಂದು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಧನ್ಯವಾದ ಹೇಳಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಕೊರೊನಾ 3ನೇ ಅಲೆಯ (2ನೇ ಪುಟಕ್ಕೆ)


TAPOVANA INSTITUTE OF NURSING, DAVANGERE.
ADMISSIONS OPEN FOR 2021-22
COURSE : GNM NURSING
For More Details Kindly Contact
Ph. : 73383 36887, 86605 31618


## ಖಾಸಗಿ ಶಾಲೆಯಲ್ಲಿ ಹೆಸರು, ಸರ್ಕಾರಿ ಶಾಲೆಯಲ್ಲಿ ಕಲಿಕೆ

### ಜಿಲ್ಲೆಯ ಹತ್ತು ಸಾವಿರ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗೆ ಬಂದರೂ ದಾಖಲಾತಿ ಸಾಧ್ಯವಾಗದೇ ಅತಂತ್ರ

**ಎಸ್.ಎ. ಶ್ರೀನಿವಾಸ್**

ದಾವಣಗೆರೆ, ಸೆ. 26 - ಆರರಿಂದ ಹತ್ತನೇ ತರಗತಿಯವರೆಗಿನ ಶಾಲೆಗಳು ಕಳೆದ ತಿಂಗಳು ಆಗಸ್ಟ್ 23 ಹಾಗೂ ಸೆಪ್ಟೆಂಬರ್ 6ರಿಂದ ಎರಡು ಹಂತಗಳಲ್ಲಿ ಆರಂಭಗೊಂಡಿದ್ದರೂ, ಕೆಲ ತೊಡಕುಗಳು ಇನ್ನೂ ಬಗೆಹರಿಯದೇ ಹತ್ತು ಸಾವಿರ ವಿದ್ಯಾರ್ಥಿಗಳು ಸಮಸ್ಯೆ ಎದುರಿಸುವಂತಾಗಿದೆ.

ಕೊರೊನಾ ಸಾಂಕ್ರಾಮಿಕದಿಂದ ಶಿಕ್ಷಣದಲ್ಲಿ ಎರಡು ವರ್ಷಗಳಿಂದ ಅನಿಶ್ಚಿತತೆ ಉಂಟಾಗಿದೆ. ಆರ್ಥಿಕ ಒತ್ತಡ ಸೇರಿದಂತೆ, ಹಲವಾರು ಕಾರಣಗಳಿಂದ ಪೋಷಕರು ಖಾಸಗಿ ಶಾಲೆಗಳಿಂದ ಸರ್ಕಾರಿ ಶಾಲೆಗಳ ಕಡೆ ಮುಖ ಮಾಡಿದ್ದಾರೆ. ಆದರೆ, ಸಾಕಷ್ಟು ಪೋಷಕರು ಹಳೆಯ ಶುಲ್ಕ ಪಾವತಿ ಮಾಡದೇ ಇರುವ ಕಾರಣ, ಖಾಸಗಿ ಶಾಲೆಗಳು ವರ್ಗಾವಣೆ ಪತ್ರ ಕೊಡಲು ನಿರಾಕರಿಸುತ್ತಿವೆ.

ಈ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗೆ ಸೇರಲು ಬಯಸಿದರೂ ದಾಖಲಾತಿ ಸಾಧ್ಯವಾಗುತ್ತಿಲ್ಲ. ಹೆಸರಿರುವುದು ಖಾಸಗಿ ಶಾಲೆಯಲ್ಲಿ, ಪಾಠ ಕಲಿಯುತ್ತಿರುವುದು ಸರ್ಕಾರಿ ಶಾಲೆಯಲ್ಲಿ ಎಂಬ ಅತಂತ್ರದಲ್ಲಿ ಈ ವಿದ್ಯಾರ್ಥಿಗಳಿದ್ದಾರೆ. ಸೆಪ್ಟೆಂಬರ್ ಮುಗಿದು ಅಕ್ಟೋಬರ್ ಸಮೀಪಿಸಿದರೂ ಈ ಗೊಂದಲ ಬಗೆಹರಿಯುತ್ತಿಲ್ಲ.



ಹೈಕೋರ್ಟ್ ಕಳೆದ ವರ್ಷ ಖಾಸಗಿ ಶಾಲೆಗಳ ಶುಲ್ಕದಲ್ಲಿ ಶೇ.30ರ ವಿನಾಯಿತಿ ನೀಡಿತ್ತು ಹಾಗೂ ಈ ವರ್ಷ ಶೇ.15ರ ವಿನಾಯಿತಿ ನೀಡಿದೆ. ಇಷ್ಟಾದರೂ, ಪೋಷಕರು ಶುಲ್ಕ ಪಾವತಿಸದ ಕಾರಣ ಮಕ್ಕಳ ಟಿ.ಸಿ. ಪಡೆಯಲು ಸಾಧ್ಯವಾಗಿಲ್ಲ. ಇಂತಹ ಮಕ್ಕಳ ಸಂಖ್ಯೆ ಸುಮಾರು 10 ಸಾವಿರದಷ್ಟಿದೆ ಎಂದು ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

ಖಾಸಗಿ ಬಿಟ್ಟು ಸರ್ಕಾರಿ ಶಾಲೆಗಳಿಗೆ ಬಂದ ಈ ಮಕ್ಕಳು ಅಧಿಕೃತವಾಗಿ ಶಾಲೆಗೆ ಸೇರ್ಪಡೆಯಾಗಲು ಸಾಧ್ಯವಾಗಿಲ್ಲ. ಈ ಮಕ್ಕಳಿಗೆ ಶಿಕ್ಷಣ ನಿರಾಕರಿಸದೇ ಪಾಠ ಮಾಡಲಾಗುತ್ತಿದೆ. ಆದರೆ, ದಾಖಲಾತಿ ವಿಷಯದಲ್ಲಿ ಶಾಲೆಗಳು ಅಸಹಾಯಕವಾಗಿವೆ. ಪ್ರತಿನಿತ್ಯ ಈ ಪೋಷಕರು ಕಚೇರಿಗಳಿಗೆ ಅಲೆದಾಡುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಸರ್ಕಾರಿ ಶಾಲೆಗಳಿಗೆ ಬಂದ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಆದರೆ, ದಾಖಲಾತಿ ಪ್ರಕ್ರಿಯೆ ಪೂರ್ಣಗೊಳ್ಳದ ಕಾರಣ, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.85ರಷ್ಟು ದಾಖಲಾತಿ ಮಾತ್ರ ಸಾಧ್ಯವಾಗಿದೆ ಎಂದು ಮೂಲಗಳು ತಿಳಿಸಿವೆ.

ಇತ್ತೀಚಿನ ವರದಿಗಳ ಪ್ರಕಾರ ಜಿಲ್ಲೆಯಲ್ಲಿನ 495 ಪ್ರೌಢಶಾಲೆಗಳಿಗೆ 77,214 ಮಕ್ಕಳು ದಾಖಲಾಗಿದ್ದಾರೆ. 1,100 ಪ್ರಾಥಮಿಕ ಶಾಲೆಗಳಿಗೆ 53,318 ವಿದ್ಯಾರ್ಥಿಗಳು ದಾಖಲಾಗಿದ್ದಾರೆ.

ಈ ಪೈಕಿ ಸರ್ಕಾರಿ ಪ್ರಾಥಮಿಕ (3ನೇ ಪುಟಕ್ಕೆ)

### ನನ್ನ ಮಗ ಎಷ್ಟನೇ ತರಗತಿ?

**ಎರಡು ವರ್ಷ ಕಲಿಕೆ ಸ್ತಬ್ಧವಾದ ನಂತರ ಶಾಲೆ ಪುನರಾರಂಭವಾದಾಗ ಪೋಷಕರೊಬ್ಬರು ಬಂದು, ನನ್ನ ಮಗ ಈಗ ಎಷ್ಟನೇ ತರಗತಿ ಎಂದು ನಮ್ಮನ್ನೇ ಕೇಳಿದರು ಎಂದು ಖಾಸಗಿ ಶಾಲೆಯ ಮುಖ್ಯೋಪಾಧ್ಯಾಯರೊಬ್ಬರು ಹೇಳಿದ್ದಾರೆ. ಒಬ್ಬ ವಿದ್ಯಾರ್ಥಿಯ ಹೆಸರು ರಾಜ್ಯ ಸರ್ಕಾರದ ಶಿಕ್ಷಣ ಸಾಫ್ಟ್‌ವೇರ್ ಆದ ಸ್ಯಾಟ್ಸ್‌ನಿಂದ ಬಿಟ್ಟು ಹೋಗಿತ್ತು. ಹೀಗಾಗಿ ಎರಡು ವರ್ಷ ಕಳೆದರೂ ಆತ ಹಳೆಯ ತರಗತಿಯಲ್ಲೇ ಇದ್ದಾನೆ. ಇನ್ನೊಬ್ಬ ವಿದ್ಯಾರ್ಥಿ ಶಾಲೆಗೆ ಬರದೇ ಇದ್ದರೂ, ಪಾಠ ಕಲಿಯದೇ ಇದ್ದರೂ ಸ್ಯಾಟ್ಸ್‌ನಲ್ಲಿ ಹೆಸರಿದ್ದ ಕಾರಣ ಎರಡು ವರ್ಷ ತೇರ್ಗಡೆಯಾಗಿದ್ದಾನೆ. ಆತ ಎಲ್ಲಿದ್ದಾನೆ ಎಂಬುದೇ ನಮಗೆ ಗೊತ್ತಿಲ್ಲ, ಹುಡುಕಲು ಹೋದರೂ ಸಿಕ್ಕಿಲ್ಲ ಎಂದು ಮುಖ್ಯೋಪಾಧ್ಯಾಯರು ಶಿಕ್ಷಣ ವಲಯದಲ್ಲಿ ಆಗಿರುವ ದುಸ್ಥಿತಿಯ ಚಿತ್ರಣ ತೆರೆದಿಟ್ಟಿದ್ದಾರೆ.**


ಎಂಟನೇಯ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀ ಡಿ.ಎನ್. ಶೇಖರಪ್ಪ ಚಿಕ್ಕನಹಳ್ಳಿ

ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ....

ಶ್ರೀಮತಿ ಗಂಗಮ್ಮ ಶೇಖರಪ್ಪ ಮತ್ತು ಮಕ್ಕಳು, ಅಳಿಯಂದಿರು,
ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

# ಯಡಿಯೂರಪ್ಪ ನೀಡಿದ ಅನುದಾನದಿಂದ ಜಗಳೂರು ಅಭಿವೃದ್ಧಿ

ಜಗಳೂರು, ಸೆ.26 - ವಿಧಾನಸಭಾ ಕ್ಷೇತ್ರದಲ್ಲಿ 1200 ಕೋಟಿ ಭದ್ರಾ ಯೋಜನೆ, 57 ಕೆರೆಗಳಿಗೆ 640 ಕೋಟಿ, ಗ್ರಾಮೀಣ ಭಾಗದ ಹಳ್ಳಿಗಳಿಗೆ ಕುಡಿಯುವ ನೀರಿಗಾಗಿ 270 ಕೋಟಿ, 17 ಕೋಟಿ ರಸ್ತೆ ಅಭಿವೃದ್ಧಿ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಯಡಿಯೂರಪ್ಪ ಮುಖ್ಯಮಂತ್ರಿಯಾದಾಗ ಹಣ ಬಿಡುಗಡೆ ಮಾಡಿದ್ದರು ಎಂದು ಶಾಸಕ ಎಸ್.ವಿ.ರಾಮಚಂದ್ರ ತಿಳಿಸಿದ್ದಾರೆ.

ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ಬಿಜೆಪಿಯಿಂದ ಹಮ್ಮಿಕೊಂಡಿದ್ದ ಪಂಡಿತ್ ದೀನ್‌ದಯಾಳ್ ಉಪಾಧ್ಯಾಯರ 105 ನೇ ಜನ್ಮ ದಿನಾಚರಣೆ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

57 ಕೆರೆಗಳಿಗೆ ನೀರು ಒದಗಿಸುವ ಯೋಜನೆಗೆ ಹಣ ಬಿಡುಗಡೆ ಸಂಬಂಧ ಸಿರಿಗೆರೆ ಶ್ರೀಗಳ ನುಡಿಯಂತೆ ನಾನು ಹಾಗೂ ಹೊಳಲ್ಕೆರೆ ಶಾಸಕ ಚಂದ್ರಪ್ಪ ರಾಜೀನಾಮೆ ನೀಡಲು ರೆಡಿಯಾಗಿದ್ದೆವು. ಆದರು ನಾವು ಎಲ್ಲೂ ಹೇಳಿಕೊಂಡಿಲ್ಲ. ಶ್ರೀಗಳ ಇಚ್ಚೆಯಂತೆ ಕ್ಷೇತ್ರಕ್ಕೆ ನೀರು ತರಲು ಏನು ಬೇಕೋ ಅದನ್ನು ನಾನು ಶಾಸಕನಾಗಿ ಮಾಡಿದ್ದೇನೆ. ನಾನು ಏನು ಮಾಡಿದ್ದೇನೆ ಎಂಬುದು ಕ್ಷೇತ್ರದ ಜನರಿಗೆ ಗೊತ್ತಿದೆ ಎಂದರು.



ಪಂಡಿತ್ ದೀನ್‌ದಯಾಳ್ ಉಪಾಧ್ಯಾಯರ 105 ನೇ ಜನ್ಮ ದಿನಾಚರಣೆಯ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಶಾಸಕ ಎಸ್.ವಿ. ರಾಮಚಂದ್ರ ಕೃತಜ್ಞತೆ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಉಚಿತವಾಗಿ ಜನರಿಗೆ ಕೋವಿಡ್ ಲಸಿಕೆ ನೀಡುವ ಮೂಲಕ ಜನರ ರಕ್ಷಣೆಗೆ ನಿಂತಿದ್ದಾರೆ. ರಾಜ್ಯದಲ್ಲಿ ಯಡಿಯೂರಪ್ಪನವರು ಸಿ.ಎಂ ಆದಾಗ ನೀರಾವರಿ ಸೇರಿದಂತೆ ಅನೇಕ ಯೋಜನೆಗಳಿಗೆ ಹಣ ಬಿಡುಗಡೆ ಮಾಡಿದ್ದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅದೇ ದಿಕ್ಕಿನಲ್ಲಿ ಹೆಜ್ಜೆ ಇಟ್ಟಿದ್ದು ದೊಣೆಹಳ್ಳಿ, ದೇವಿಕೆರೆ, ಬಿದರಕೆರೆ ಗ್ರಾಮ ಪಂಚಾಯಿತಿಗಳನ್ನು ಅಮೃತ ಗ್ರಾಮ ಯೋಜನೆಗೆ ಆಯ್ಕೆ ಮಾಡಿ ಅಭಿವೃದ್ಧಿಗೆ ನೆರವಾಗಿದ್ದಾರೆ.

ಬಿಜೆಪಿ ಮಂಡಲ ಅಧ್ಯಕ್ಷ ಹೆಚ್.ಸಿ.ಮಹೇಶ್ ಮಾತನಾಡಿ, ಶಾಸಕ ಎಸ್.ವಿ. ರಾಮಚಂದ್ರ ನೇತೃತ್ವದಲ್ಲಿ ಬಿಜೆಪಿ ಸದಾ ಹುಮ್ಮಸ್ಸಿನಲ್ಲಿದ್ದು ಮುಂಬರಲಿರುವ ಜಿ. ಪಂ., ತಾ.ಪಂ ಚುನಾವಣೆಯಲ್ಲಿ ಕಾರ್ಯಕರ್ತರು ರಾಜ್ಯ ಹಾಗೂ ಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳನ್ನು ಮನೆ ಮನೆಗೆ ಮುಟ್ಟಿಸುವಂತಹ ಕೆಲಸ ಮಾಡುವ ಮೂಲಕ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಲು ಹುಮ್ಮಸ್ಸಿನಿಂದಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಜಿ.ಪಂ.ಮಾಜಿ ಸದಸ್ಯರಾದ ಎಸ್.ಕೆ.ಮಂಜುನಾಥ್, ತಾ.ಪಂ. ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಗಡಿಮಾಕುಂಟೆ ಸಿದ್ದೇಶ್, ತಾ.ಪಂ. ಮಾಜಿ ಅಧ್ಯಕ್ಷ ಬಿ.ಆರ್.ಅಂಜಿನಪ್ಪ, ದೇವಿಕೆರೆ ಶಿವಕುಮಾರಸ್ವಾಮಿ, ಪ.ಪಂ. ಅಧ್ಯಕ್ಷ ತಿಪ್ಪೇಸ್ವಾಮಿ, ಉಪಾಧ್ಯಕ್ಷೆ ಲಲಿತಮ್ಮ, ಪ.ಪಂ ಸದಸ್ಯರಾದ ಪಾಪಲಿಂಗಪ್ಪ, ನವೀನ್ ಕುಮಾರ್, ಮಂಜಮ್ಮ ಮತ್ತಿತರರು ಹಾಜರಿದ್ದರು.

# ಪಕ್ಷದ ಕಟ್ಟ ಕಡೆಯ ಕಾರ್ಯಕರ್ತನನ್ನು ಗುರುತಿಸುವುದೇ ಬಿಜೆಪಿ ಉದ್ಧೇಶ



ಹರಿಹರ, ಸೆ.26- ಹರಿಹರ ನಗರ ಬಿಜೆಪಿ ಮಂಡಲ ವತಿಯಿಂದ ನಗರದ ಬೂತ್ ಅಧ್ಯಕ್ಷರ ನಿವಾಸಕ್ಕೆ ನಾಮಫಲಕ ಅಳವಡಿಕೆಗೆ ಚಾಲನೆ ನೀಡಲಾಯಿತು.

ಬೂತ್ ಅಧ್ಯಕ್ಷರ ಮನೆಗೆ ನಾಮಫಲಕ ಅಳವಡಿಸಿ ಮಾತನಾಡಿದ ಮಾಜಿ ಶಾಸಕ ಬಿ.ಪಿ. ಹರೀಶ್, ನಮ್ಮ ಪಕ್ಷದಲ್ಲಿ ಯಾವ ನಾಯಕರ ಮನೆಗೂ ನಾಮಫಲಕ ಅಳವಡಿಸಿಲ್ಲ. ಆದರೆ, ಬೂತ್ ಅಧ್ಯಕ್ಷರುಗಳನ್ನು ಗುರುತಿಸಿ ನಾಮಫಲಕ ಜೋಡಿಸಲಾಗಿದೆ. ಇದರಿಂದ ಕಟ್ಟಕಡೆಯ ಕಾರ್ಯಕರ್ತನನ್ನು ಗುರುತಿಸುವುದು ಇದರ ಉದ್ದೇಶ ಎಂದು ತಿಳಿಸಿದರು.

ಕೇಂದ್ರ-ರಾಜ್ಯ ಸರ್ಕಾರಗಳ ಜನಪರ ಯೋಜನೆಗಳನ್ನು ಪ್ರತಿ ಮನೆ-ಮನೆಗೆ ಮುಟ್ಟಿಸುವಲ್ಲಿ ಬೂತ್ ಅಧ್ಯಕ್ಷರು ಪ್ರಾಮಾಣಿಕವಾಗಿ ಕೆಲಸ ಮಾಡುವಂತೆ ತಿಳಿಸಿದರು.

ಬಿಜೆಪಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್ ಮಾತನಾಡಿ, ಪಕ್ಷದ ವರಿಷ್ಠರು ಬೂತ್ ಅಧ್ಯಕ್ಷರುಗಳ ಶಕ್ತಿಯನ್ನು ಗುರುತಿಸಿ ಅವರ ಮನೆಗಳಿಗೆ ನಾಮಫಲಕ ಅಳವ ಡಿಸಲು ಅವಕಾಶ ನೀಡಿದ್ದಾರೆ. ಇಂತಹ ಸಂದರ್ಭವನ್ನು ಸದುಪಯೋಗ ಪಡಿಸಿಕೊಂಡು ಮುಂಬರುವ ಎಲ್ಲಾ ಚುನಾವಣೆಗಳಲ್ಲಿಯೂ ಪಕ್ಷಕ್ಕೆ ಗೆಲುವು ತಂದುಕೊಡುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದರು.

**ಹರಿಹರ: ಬೂತ್ ಅಧ್ಯಕ್ಷರ ನಿವಾಸಕ್ಕೆ ನಾಮಫಲಕ ಅಳವಡಿಕೆಗೆ ಮಾಜಿ ಶಾಸಕ ಬಿ.ಪಿ. ಹರೀಶ್ ಚಾಲನೆ**

ಈ ಸಂದರ್ಭದಲ್ಲಿ ಬಿಜೆಪಿ ನಗರ ಘಟಕದ ಮಾಜಿ ಅಧ್ಯಕ್ಷ ರಾಜು ರೋಖಡೆ, ಪ್ರಧಾನ ಕಾರ್ಯದರ್ಶಿ ಹೆಚ್. ಮಂಜಾನಾಯ್ಕ, ಉಪಾಧ್ಯಕ್ಷ ತುಳಜಪ್ಪ ಭೂತೆ, ನಗರಸಭಾ ಸದಸ್ಯ ಆಟೋ ಹನುಮಂತಪ್ಪ, ಮುಖಂಡರಾದ ಕೆ.ಜಿ.ಕೃಷ್ಣ, ರಾಘವೇಂದ್ರ ಕೊಂಡಜ್ಜಿ, ರಾಜು ಐರಣಿ, ಗಿರೀಶ್ ಹೆಚ್., ಸುನೀಲ್ ಕುಮಾರ್, ವೀರೇಶ್ ಆಚಾರ್, ನಲ್ಲಿ ಮಂಜುನಾಥ್, ಅಶೋಕ್ ಕುಂಬಳೂರು, ವಿನಾಯಕ ಆರಾಧ್ಯಮಠ, ಆನಂದ, ಅದ್ವೈತ್ ಶಾಸ್ತ್ರಿ, ಭರತ್ ಶೆಟ್ಟಿ, ಶಾಂತರಾಜ್, ಕಿರಣ್ ಮೂಲಿಮನಿ, ರಾಘವೇಂದ್ರ ದೀಕ್ಷಿತ್, ಆದಿತ್ಯ ಟಿ. ಮೆಹರ್ವಾಡೆ ಮತ್ತು ಇತರರು ಈ ಸಂದರ್ಭದಲ್ಲಿದ್ದರು.

# ತಿಮ್ಮಪ್ಪನೂ ದೇಶ ಬದಲಿಸಲಾರ

**(1ನೇ ಪುಟದಿಂದ)** ಎಂಬ ನ್ಯಾಯದ ನಾಲ್ಕು ಗಾಲಿಗಳನ್ನು ಬಲಪಡಿಸಬೇಕಿದೆ ಎಂದು ಬಿದರಿ ಹೇಳಿದರು.

ಪೊಲೀಸ್ ಹಾಗೂ ಕಂದಾಯ ಇಲಾಖೆಯನ್ನು ರಾಜಕಾರಣಿಗಳು 'ಅಭಿವೃದ್ಧಿ ಕೆಲಸ'ಗಳಿಂದ ಹೊರಗಿಡಿ. ಆಗ ನ್ಯಾಯದಾನ ಬಲವಾಗುತ್ತದೆ. ಅಂತಹ ವ್ಯವಸ್ಥೆ ಜಾರಿಗೆ ತಂದು, ನಂತರದಲ್ಲೂ ಪೊಲೀಸರು ತಪ್ಪು ಮಾಡಿದರೆ ಕಠಿಣ ಶಿಕ್ಷೆ ಕೊಡಿ ಎಂದವರು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ, ಪೊಲೀಸ್ ಕೆಲಸ ಗೌರವದ ಜವಾಬ್ದಾರಿಯಾಗಿದೆ. ದಿನದ 24 ಗಂಟೆಗಳ ಕಾಲವೂ ಕಾನೂನು ವ್ಯವಸ್ಥೆ ಕಾಯ್ದುಕೊಳ್ಳದೇ ಹೋದರೆ, ಯಾರ ತಲೆ ಎಲ್ಲೋ ಹೋಗುವ ಪರಿಸ್ಥಿತಿ ಆಗುತ್ತದೆ. ಇಂದಿನ ದಿನಗಳಲ್ಲಿ ಪೊಲೀಸರಿಗೆ ಸಿಗುವ ಸೌಲಭ್ಯಗಳೂ ಹೆಚ್ಚಾಗಿವೆ ಎಂದು ಹೇಳಿದರು.

ಶಾಸಕ ಎಸ್.ಎ. ರವೀಂದ್ರನಾಥ್ ಮಾತನಾಡಿ, ಪೊಲೀಸರು ಭಾಷೆ ಸುಧಾರಿಸಿಕೊಳ್ಳಬೇಕು. 'ಪೊಲೀಸ್ ಭಾಷೆ' ಎಂಬ ಟೀಕೆ ತಪ್ಪಿಸಲು ಪೊಲೀಸರು ಹಗುರ ಮಾತುಗಳನ್ನು ಬಳಸಬಾರದು ಎಂದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಮಾತನಾಡಿದರು.

ಈ ಸಂದರ್ಭದಲ್ಲಿ ಭವನ ನಿರ್ಮಾಣಕ್ಕೆ ನೆರವಾದ ಹಾವೇರಿ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಅವರನ್ನು ಸನ್ಮಾನಿಸಲಾಯಿತು.

ಉಪಾಧ್ಯಕ್ಷ ಎನ್. ಲಿಂಗಾರೆಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘದ ಅಧ್ಯಕ್ಷ ಜಿ.ಕೆ. ಬಸವರಾಜಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಸಮಾರಂಭದಲ್ಲಿ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘದ ಅಧ್ಯಕ್ಷ ಎನ್. ನಾಗರಾಜ್, ಸಂಘದ ಮಾಜಿ ಕಾರ್ಯದರ್ಶಿ ಕುಮಾರ್ ಎಸ್. ಕರ್ನಿಂಗ್, ಜಿಲ್ಲಾ ಸಂಘದ ನಿಕಟಪೂರ್ವ ಅಧ್ಯಕ್ಷರಾದ ಎಂ.ಎಸ್ ಶಿವಾಚಾರ್ಯ, ಬಿ.ಬಿ. ಸಕ್ರಿ ಉಪಸ್ಥಿತರಿದ್ದರು.

ಜಿಲ್ಲಾ ಸಂಘದ ಉಪಾಧ್ಯಕ್ಷ ರವಿನಾರಾಯಣ ಸ್ವಾಗತಿಸಿದರು.

## ಪ್ರತಿ ಜಿಲ್ಲೆಯಲ್ಲೂ ನಿವೃತ್ತರಿಗೆ ಭವನ, ಆರೋಗ್ಯ ಕಾಳಜಿ

ನಿವೃತ್ತ ಪೊಲೀಸರ ಕಲ್ಯಾಣಕ್ಕಾಗಿ ಪೊಲೀಸ್ ವರಿಷ್ಠಾಧಿಕಾರಿ ಹಂತದ ಅಧಿಕಾರಿಯೊಬ್ಬರನ್ನು ನೇಮಿಸಬೇಕು ಹಾಗೂ ಪ್ರತಿ ಜಿಲ್ಲೆಯಲ್ಲಿ ನಿವೃತ್ತ ಪೊಲೀಸರಿಗೆ ಭವನ ನಿರ್ಮಿಸಬೇಕು ಎಂದು ಮಾಜಿ ಡಿಜಿಪಿ ಡಾ. ಶಂಕರ್ ಮಹಾದೇವ ಬಿದರಿ ಅಭಿಪ್ರಾಯ ಪಟ್ಟಿದ್ದಾರೆ.

ಸೈನಿಕರು ಅಪರೂಪಕ್ಕೆ ಯುದ್ಧ ಮಾಡುತ್ತಾರೆ. ಪೊಲೀಸರು ಪ್ರತಿನಿತ್ಯ ಯುದ್ಧ ಎದುರಿಸುತ್ತಾರೆ. ಹೀಗಾಗಿ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕಿದೆ. ಕೇಂದ್ರ ಸರ್ಕಾರದ ಸಿ.ಜಿ.ಹೆಚ್.ಎಸ್. ಮಾದರಿಯಲ್ಲಿ ಪೊಲೀಸರಿಗೆ ಆರೋಗ್ಯ ಸೌಲಭ್ಯ ಕಲ್ಪಿಸಬೇಕು ಎಂದವರು ಆಗ್ರಹಿಸಿದರು.

## ಪೋಸ್ಟಿಂಗ್‌ಗೆ ಕೋಟಿಗಳ ಹಣ

**(1ನೇ ಪುಟದಿಂದ) ಉಳಿಯುವುದಿಲ್ಲ, ಚುನಾವಣೆ ಬಂದಾಗ ಹಣ ಹರಿದು ಹೋಗುತ್ತದೆ.**

**ಈ ಬಗ್ಗೆ ಮುಕ್ತವಾಗಿ ಮಾತನಾಡಬೇಕಿದೆ. ಎಷ್ಟು ದಿನ ರೋಗವನ್ನು ಮುಚ್ಚಿಡಬೇಕು? ಈ ರೋಗಕ್ಕೆ ಜನರೇ ಮದ್ದು ನೀಡಬೇಕಾಗಿದೆ. ಹೀಗಾಗಿ ವಾಸ್ತವ ವಿಷಯವನ್ನು ಜನರಿಗೆ ತಿಳಿಸಬೇಕಿದೆ ಎಂದವರು ಹೇಳಿದರು.**

# ಸಾಂಪ್ರದಾಯಿಕ ದಸರಾ

**(1ನೇ ಪುಟದಿಂದ)** ತಯಾರಿಸಿದ ಎಸ್ಟಿಮೇಟ್‌ಗೂ, ನಿರ್ಮಾಣಕ್ಕೂ ತಗುಲಿದ ವೆಚ್ಚದಲ್ಲಿ ವ್ಯತ್ಯಾಸವಾಗಿದ್ದು, ಗುತ್ತಿಗೆ ಪಡೆದ ಇಂಜಿನಿಯರ್ ಲೋಪವೆಸಗಿದ್ದಾರೆ. ಅಲ್ಲದೇ ಮಳಿಗೆಗಳ ನಿರ್ಮಾಣದಲ್ಲಿ ಗುಣಮಟ್ಟ ಇಲ್ಲವಾಗಿದ್ದು, ಒಂದು ವರ್ಷದಲ್ಲಿ ಗೋಡೆಗಳು ಬಿರುಕುಬಿಟ್ಟಿವೆ ಎಂದು ತಾವು ಸಂಗ್ರಹಿಸಿದ ಸಾಕ್ಷಿ ಸಹಿತವಾದ ಫೋಟೋಗಳು ಮತ್ತು ದಾಖಲೆಗಳ ಮುಖೇನ ಮುಖಂಡ ಯಶವಂತರಾವ್ ಜಾಧವ್ ಸಭೆಯಲ್ಲಿ ಆರೋಪಿಸಿದರು.

ಆರು ಜನರ ಸಮಿತಿ ರಚಿಸಿ ಬೇರೊಬ್ಬ ಇಂಜಿನಿಯರ್ ಒಡಗೂಡಿ ಮಳಿಗೆಗಳ ಸ್ಥಿತಿ ಹಾಗೂ ಘಟಕ ವೆಚ್ಚ ಕುರಿತು ಪರಿಶೀಲನೆ ನಡೆಸಲು ಡಾ. ಶಾಮನೂರು ಶಿವಶಂಕರಪ್ಪ ಸೂಚಿಸಿದರು. ಕಾಮಗಾರಿ ಲೋಪವಾಗಿದ್ದರೆ ಸರಿಪಡಿಸಲು ತಾಕೀತು ಮಾಡಿದರು.


ಭಕ್ತರು ನೀಡಿದ ಕಾಣಿಕೆ ಹಣವನ್ನು ದೇವಸ್ಥಾನದ ಅಭಿವೃದ್ಧಿಗೆ ಬಿಟ್ಟು ಬೇರೆ ಯಾವುದಕ್ಕೂ ಬಳಸಬಾರದು ಎಂದು ಸಭೆಯಲ್ಲಿ ಭಕ್ತರು, ಕೆಲ ಸದಸ್ಯರು ಮನವಿ ಮಾಡಿದರು.

ಸಭೆಯಲ್ಲಿ ಟ್ರಸ್ಟ್‌ನ ಸದಸ್ಯರುಗಳಾದ ಗೌಡ್ರ ಚನ್ನಬಸಪ್ಪ, ಜೆ.ಕೆ. ಕೊಟ್ರಬಸಪ್ಪ, ಹೆಚ್.ಬಿ. ಗೋಣೆಪ್ಪ, ಹನುಮಂತರಾವ್ ಸಾವಂತ್, ಹನುಮಂತರಾವ್ ಜಾಧವ್, ಉಮೇಶ್ ಸಾಳಂಕಿ, ಸೊಪ್ಪಿನವರ ಗುರುರಾಜ್, ಬಿ.ಕೆ. ರಾಮಕೃಷ್ಣ, ಮುಖಂಡರುಗಳಾದ ನಗರ ಪಾಲಿಕೆ ಸದಸ್ಯ ಜಿ.ಡಿ. ಪ್ರಕಾಶ್, ಕರಿಗಾರ ಬಸಪ್ಪ, ಬಳ್ಳಾರಿ ಷಣ್ಮುಖಪ್ಪ, ಪಿ.ಜೆ. ನಾಗರಾಜ್, ರಾಜನಹಳ್ಳಿ ಶಿವಕುಮಾರ್, ಟಿ.ಅಜ್ಜಣ್ಣ, ಈರಣ್ಣ ಎಲಿಗಾರ್, ಕವಿರಾಜ್ ಸೇರಿದಂತೆ ಇತರರು ಇದ್ದರು.

# ಜನ್ಮದಿನಕ್ಕೆ ಶುಭಾಶಯ ಕೃತಜ್ಞತೆಗಳು

**(1ನೇ ಪುಟದಿಂದ)** ಭೀತಿ ನಡುವೆಯೂ ನನ್ನ ಮನೆ, ಕಚೇರಿಗೆ ಗುರು - ಹಿರಿಯರು, ಅಭಿಮಾನಿಗಳು, ಕಾಂಗ್ರೆಸ್ ಪಕ್ಷದ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಮತ್ತು ಪ್ರತ್ಯಕ್ಷ - ಪರೋಕ್ಷವಾಗಿ ಶುಭ ಕೋರಿ ನನ್ನನ್ನು ಹರಸಿದ ಎಲ್ಲರಿಗೂ ಧನ್ಯವಾದಗಳು' ಎಂದು ಹೇಳಿದ್ದಾರೆ.

# ರಾಣೇಬೆನ್ನೂರು : ಕಾಂಗ್ರೆಸ್‌ನಿಂದ ತೂಕದ ಯಂತ್ರ ಕೊಡುಗೆ



ರಾಣೇಬೆನ್ನೂರು, ಸೆ.25 - ಬೆಂಕಿ ಅವಘಡದಲ್ಲಿ ನೊಂದ ಸಣ್ಣ ವ್ಯಾಪಾರಸ್ಥರಿಗೆ ತಾಲ್ಲೂಕು ಕಾಂಗ್ರೆಸ್ ಪಕ್ಷದ ವತಿಯಿಂದ ವಿದ್ಯುನ್ಮಾನ ತೂಕದ ಯಂತ್ರ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕೋಳಿವಾಡ, ಧನ ಸಹಾಯ ಮಾಡವುದಕ್ಕಿಂತ ಇಂತಹ ಉಪಕರಣಗಳಿಂದ ನಿಮ್ಮ ವ್ಯಾಪಾರ ವಹಿವಾಟು ನಡೆಸಬಹುದು. ಇದು ಬದುಕು ಸಾಗಿಸುವ ಸುಲಭ ಮಾರ್ಗ.

ಇಂತಹ ಸಿದ್ಧಾಂತಗಳಿಂದ ಕಾಂಗ್ರೆಸ್ ಬಡವರ, ದೀನ-ದಲಿತರ, ಹಿಂದುಳಿದವರ ನೋವುಗಳಿಗೆ ಸ್ಪಂದಿಸುತ್ತದೆ ಎಂದರು.

ನೊಂದ 90 ಜನರಿಗೆ ತೂಕದ ಯಂತ್ರ ನೀಡುವ ಈ ಕಾರ್ಯಕ್ರಮದಲ್ಲಿ ನಗರಸಭೆ ಸದಸ್ಯರಾದ ಪುಟ್ಟಪ್ಪ ಮರಿಯಮ್ಮನವರ, ನಿಂಗರಾಜ ಕೋಡಿಹಳ್ಳಿ, ಶೇಖಪ್ಪ ಹೊಸಗೌಡ್ರ, ಪಕ್ಷದ ಅಧ್ಯಕ್ಷರಾದ ಮಂಜನಗೌಡ ಪಾಟೀಲ, ಶೇರು ಕಾಬೂಲಿ, ಆನಂದ ಹುಲ್ಲಮನಿ ಮುಂತಾದವರು ಇದ್ದರು.

ಮೃತ್ಯುಂಜಯ ಗುದಿಗೇರ ಕಾರ್ಯಕ್ರಮ ನಿರೂಪಿಸಿದರು.

# ಹಿರಿಯರು ಕಿರಿಯರಿಗೆ ಸ್ಫೂರ್ತಿ

**(1ನೇ ಪುಟದಿಂದ)** ಅವರು ಸಲಹೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹಿರಿಯ ನ್ಯಾಯವಾದಿ ಎಲ್.ಹೆಚ್. ಅರುಣ್‌ಕುಮಾರ್ ಮಾತನಾಡುತ್ತಾ, ಹಿರಿಯ ನಾಗರಿಕರು ಎಂಬುದು ಪ್ರತ್ಯೇಕ ಸಮುದಾಯವಲ್ಲ, ಎಲ್ಲಾ ಕ್ಷೇತ್ರಗಳಲ್ಲೂ ಸಕ್ರಿಯವಾಗಿ ದುಡಿದು, ವಯಸ್ಸಾದ ನಂತರ ಹಿರಿಯ ನಾಗರಿಕ ಎಂಬ ಪದ ಬಳಕೆಗೆ ಬಂದಿದೆ. ಅಭಿವೃದ್ಧಿ ರಾಷ್ಟ್ರಗಳಾದ ಜಪಾನ್, ಜರ್ಮನಿಗಳಲ್ಲಿ ಶೇ.70ರಷ್ಟು ಹಿರಿಯ ನಾಗರಿಕರೇ ಇದ್ದು, ಅವರು ಸಕ್ರಿಯವಾಗಿ ದೇಶದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದರು.

ಸಮಾಜದಲ್ಲಾಗಿರುವ ಬದಲಾವಣೆ ಗಳಿಂದಾಗಿ ಹಿರಿಯರ ಬಗ್ಗೆ ಪ್ರೀತಿ ಅನುಕಂಪ, ಸಹಾನುಭೂತಿಯಂತಹ ಮಾನವೀಯ ಮೌಲ್ಯಗಳು ಕಂಡುಬರುತ್ತಿಲ್ಲ. ಹಿರಿಯರ ಮೌಲ್ಯಗಳು, ಸಂಸ್ಕಾರ ಹಾಗೂ ಅವರ ಜೀವನದ ಅನುಭವಗಳು ಎಲ್ಲರಿಗೂ ದಾರಿದೀಪವಾಗಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘದ ಉಪಾಧ್ಯಕ್ಷರೂ, ಜಿಲ್ಲಾ ಹಿರಿಯ ನಾಗರಿಕರ ಸಂಘದ ಗೌರವ ಕಾರ್ಯದರ್ಶಿಗಳೂ ಆದ ಎಸ್. ಗುರುಮೂರ್ತಿ, ಸ್ಪರ್ಧೆಗಳಲ್ಲಿ ಹಿರಿಯ ನಾಗರಿಕರು ಅತೀ ಹೆಚ್ಚಿನ ರೀತಿಯಲ್ಲಿ ಪಾಲ್ಗೊಂಡಿರುವುದು ಶ್ಲಾಘನೀಯ ಎಂದು ತಿಳಿಸಿದರು.

ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣದ ಅಧಿಕಾರಿ ಡಾ.ಕೆ.ಕೆ. ಪ್ರಕಾಶ್, ಸುರಕ್ಷಾ ಮಲ್ಟಿಪರ್ಪಸ್ ಸಂಸ್ಥೆಯ ಅಧ್ಯಕ್ಷ ಷಾನವಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.


# ಭಾರತ್ ಬಂದ್

**(1ನೇ ಪುಟದಿಂದ)** ಬೆಂಬಲ ನೀಡಿವೆ.

**ಕಾಂಗ್ರೆಸ್ ಬೆಂಬಲ:** ಸೋಮವಾರ ರೈತ ಸಂಘಟನೆಗಳು ಕರೆ ನೀಡಿರುವ ಭಾರತ ಬಂದ್‌ಗೆ ಬೆಂಬಲಿಸುವಂತೆ ತನ್ನ ಕಾರ್ಯಕರ್ತರು ಹಾಗೂ ಮುಖಂ ಡರಿಗೆ ಕಾಂಗ್ರೆಸ್ ಕರೆ ನೀಡಿದೆ. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ಹಲವಾರು ರೈತ ಸಂಘಟನೆಗಳ ಒಕ್ಕೂಟವಾದ ಸಂಯುಕ್ತ ಕಿಸಾನ್ ಮೋರ್ಚಾ ಬಂದ್‌ಗೆ ಕರೆ ನೀಡಿದೆ.


ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣು ಗೋಪಾಲ್, ಭಾರತ್ ಬಂದ್‌ಗೆ ತಮ್ಮ ಕಾರ್ಯಕರ್ತರು ಪೂರ್ಣ ಬೆಂಬಲ ನೀಡಲಿದ್ದಾರೆ ಎಂದರು.

## ಬಿ.ಆರ್. ನಾಗರಾಜಯ್ಯ ನಿಧನ



ದಾವಣಗೆರೆ ಸರಸ್ವತಿ ನಗರ ಕೆ.ಎಸ್.ಎಸ್. ಕಾಲೇಜು ಹಿಂಭಾಗದ ವಾಸಿ, ಹೊನ್ನಾಳಿ ಕ್ಷೇತ್ರಶಿಕ್ಷಣಾಧಿಕಾರಿ ಕಚೇರಿಯ ನಿವೃತ್ತ ಅಧೀಕ್ಷಕರಾಗಿದ್ದ ಬಿ.ಆರ್. ನಾಗರಾಜಯ್ಯ (64) ಇವರು ದಿನಾಂಕ 26.09.2021ರಂದು ಭಾನುವಾರ ಮಧ್ಯಾಹ್ನ 2 ಗಂಟೆಗೆ ನಿಧನರಾದರು. ಪತ್ನಿ, ಸಹೋದರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.09.2021ರಂದು ಸೋಮವಾರ ಬೆಳಗ್ಗೆ 11 ಗಂಟೆಗೆ ಚನ್ನಗಿರಿ ತಾಲ್ಲೂಕು ದೊಡ್ಡ ಮಲ್ಲಾಪುರದಲ್ಲಿ ನೆರವೇರಲಿದೆ.

## ಸಿರಸ್ತಳ್ಳಿ ಬಸಮ್ಮ ನಿಧನ



ದಾವಣಗೆರೆ ಹೊಂಡದ ಸರ್ಕಲ್ ಹತ್ತಿರದ ತಳವಾರ ಪೇಟೆ ವಾಸಿ ದಿ.ಹನುಮಂತಪ್ಪನವರ ಧರ್ಮಪತ್ನಿ ಸಿರಸ್ತಳ್ಳಿ ಬಸಮ್ಮ (80) ಅವರು ದಿನಾಂಕ 26.09.2021ರಂದು ಭಾನುವಾರ ಮಧ್ಯಾಹ್ನ 3.25ಕ್ಕೆ ನಿಧನರಾಗಿದ್ದಾರೆ. ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.09.2021ರಂದು ಸೋಮವಾರ ಮಧ್ಯಾಹ್ನ 12 ಗಂಟೆಗೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು


**ಮನೆ ಬಾಡಿಗೆಗೆ (PG ಮಾಡಲು)**
ಪಿಜಿ ಮಾಡಲು ತುಂಬಾ ಚೆನ್ನಾಗಿ ಇದೆ. 10 ಬೆಡ್ ರೂಮ್‌ವುಳ್ಳ
ಕಿರಣ್ ಬೂಸ್ನೂರ್ (ಏಜೆಂಟ್)
97315-63409, 98440-63409
(ಆಂಜನೇಯ ಲೇಔಟ್‌ನಲ್ಲಿ PG ಮಾಡಲು ಮಾತ್ರ)

**ಕರ್ನಾಟಕ ಗೃಹಮಂಡಳಿಯಲ್ಲಿ ಸೈಟ್‌ಗಳು ಮನೆಗಳು ಮಾರಾಟಕ್ಕಿವೆ**
40x60 East, 30x50 West, 30x40 East, 30x40 South, 30x40, 30x40 North ಅಕ್ಕ-ಪಕ್ಕ, 60x40 North
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್ ಮಾರಾಟಕ್ಕೆ (21 ಲಕ್ಷಕ್ಕೆ)**
ಕರ್ನಾಟಕ ಗೃಹ ಮಂಡಳಿ (KHB)
30x48 ಪೂರ್ವ (9x14.85)
ಡಬಲ್ ರೋಡ್‌ಗೆ 80 ಅಡಿ ರಸ್ತೆಗೆ
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409

**ಸೈಟ್‌ಗಳು ಮಾರಾಟಕ್ಕಿವೆ**
60x40 ಸಿದ್ದವೀರಪ್ಪ ಬಡಾವಣೆಯಲ್ಲಿ, 50x68 ಕಾರ್ನರ್, ಆಂಜನೇಯ ಬಡಾವಣೆಯಲ್ಲಿ, 70x62 ಕಾರ್ನರ್ ಡಾಲರ್ಸ್ ಕಾಲೋನಿಯಲ್ಲಿ, 30x46 North, ಜೆ.ಹೆಚ್ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಮಾರಾಟಕ್ಕೆ**
(30 ವರ್ಷ ಹಳೆಯ)
(ನೇರವಾಗಿ ರಿಜಿಸ್ಟರ್ ಮಾಲೀಕರಿಂದ)
30×40 ಪೂರ್ವ, ಸಿದ್ದವೀರಪ್ಪ ಬಡಾವಣೆ
ಕಿರಣ್ ಬೂಸ್ನೂರ್ (ಏಜೆಂಟ್)
98440-63409

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹೆಣ್ಣುಮಕ್ಕಳು ಮತ್ತು ಗಂಡಸರು ಬೇಕಾಗಿದ್ದಾರೆ.
ಮೊ. 98863 79790

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. Two wheelar Bike ಇರಬೇಕು, Petrol ಭತ್ಯೆ ಕೊಡಲಾಗುವುದು.
94807 95548, 98800 42597, 95354 48742 (whatsapp / call Resume)

**ಬೇಕಾಗಿದ್ದಾರೆ**
KSRTC ಕಾರ್ಗೋ ಆಸೀಸ್ ನಲ್ಲಿ ಬೆಂಗಳೂರು ಮತ್ತು ದಾವಣಗೆರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಪುರುಷರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ KSRTC ಬಸ್ ಸ್ಟ್ಯಾಂಡ್, ಹೈಸ್ಕೂಲ್ ಮೈದಾನ, ಎವಿಕೆ ಕಾಲೇಜು ರೋಡ್
9008475410, 9986682042

**ಮನೆ ಬಾಡಿಗೆಗೆ ಇದೆ**
ನಿಜಲಿಂಗಪ್ಪ ಬಡಾವಣೆ, ನ್ಯಾಷನಲ್ ಕಾನ್ವೆಂಟ್ ಎದುರು, "ಕಾಯಕ ಸಿರಿ" ಗ್ರೌಂಡ್ ಫ್ಲೋರ್‌ನಲ್ಲಿ, 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮೊದಲ ಆದ್ಯತೆ)
63621 06700

**ಬೇಕಾಗಿದ್ದಾರೆ**
ಪ್ರತಿ ದಿನ 4 ಗಂಟೆ ಸಂಜೆ ವ್ಯಾಯಾಮ ಮಾಡಿಸುವವರು ಬೇಕಾಗಿದ್ದಾರೆ. (ಪುರುಷರು)
Contact
93417 77567

**ಸೈಟ್ ಬೇಕಾಗಿರುತ್ತದೆ**
ತರಳಬಾಳು ಬಡಾವಣೆ, ವಿದ್ಯಾನಗರ, ಶಿವಕುಮಾರಸ್ವಾಮಿ ಬಡಾವಣೆ, ಆಂಜನೇಯ ಬಡಾವಣೆ, ಬನಶಂಕರಿ ಬಡಾವಣೆಗಳಲ್ಲಿ
30x50 or 40x60
94482 32901, 94492 66296

**ಬೇಕಾಗಿದ್ದಾರೆ**
ವೊಡಾಫೋನ್, ಐಡಿಯಾ ಉದ್ಯೋಗ ಅವಕಾಶ, ದಾವಣಗೆರೆಯಲ್ಲಿ ಕೆಲಸ ಮಾಡಲು ಸೇಲ್ಸ್ ಪ್ರಮೋಟರ್ ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC/PUC, 18 ವರ್ಷ ಮೇಲ್ಪಟ್ಟು, ಉತ್ತಮ ಸಂವಹನ ಕೌಶಲ್ಯ, ಸೇಲ್ಸ್ ಬಗ್ಗೆ ಹೆಚ್ಚಿನ ಅನುಭವ, ಫುಲ್ ಟೈಮ್/ ಪಾರ್ಟ್ ಟೈಮ್.
9886018382, 91410 05356

**ಬೇಕಾಗಿದ್ದಾರೆ**
1) ಮನೆ ಕೆಲಸಕ್ಕೆ ಲಿಂಗಾಯಿತ ಮಹಿಳೆಯರು ಬೇಕಾಗಿದ್ದಾರೆ.
2) ವಾಚ್‌ಮನ್ (ಹಗಲು ಮತ್ತು ರಾತ್ರಿ) ಬೇಕಾಗಿದ್ದಾರೆ
ಮೊ: 98808 53626

**ಜಮೀನು ಮಾರಾಟಕ್ಕಿದೆ**
1 ಎಕರೆ ನೀರಾವರಿ ಜಮೀನು ಮಾರಾಟಕ್ಕಿದೆ. (NH-4 (ಬಾತಿ) ನಿಂದ 6 ಕಿ.ಮೀ ದೂರ)
@ Rs 29 Laks/ Acre
74112 50447

**ತೂಕದ ಲೆಕ್ಕದ ಬಟ್ಟೆ ಅಂಗಡಿ**
ಸೇಲ್... ಸೇಲ್... ಸೇಲ್...
ಮಲಬಾರ್ ಕಾಟನ್‌ನಲ್ಲಿ
Limited Offer Only
1 ಕೆ.ಜಿ ~~799~~ ಈಗ 599/-,
2 ಕೆ.ಜಿ ~~1600~~ ಈಗ 999 ಮಾತ್ರ
97420 90612

**WANTED**
Tele Callers, Data Entry, Executives, SSLC/PUC for outbond Process.
Contact Timing:10.00am to 5.00 pm
83106 28910

**ಮನೆ ಬಾಡಿಗೆಗೆ ಇದೆ**
ಎಸ್.ಕೆ.ಪಿ ರಸ್ತೆ, ಗಣೇಶ ಪೇಟೆ, ಬೇವಿನ ಮರದ ಎದುರು 3 ಬೆಡ್ ರೂಂ ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮೊದಲ ಆದ್ಯತೆ)
ವಿಚಾರಿಸಿ
63621 06700

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಅಡುಗೆ ಮಾಡುವವರು ಬೇಕಾಗಿದ್ದಾರೆ.
(North indian/ South indian)
80501 42386

**ಜಮೀನು ಮಾರಾಟಕ್ಕಿದೆ**
ಪುಣಭಘಟ್ಟ ಗ್ರಾಮ, ಅರಸಿಕೆರೆ ಹೋಬಳಿ, ಹರಪನಹಳ್ಳಿ ತಾಲ್ಲೂಕು. ಸರ್ವೆ ನಂ. 335/A-4.08 ಸೆಂಟ್ಸ್, ಸರ್ವೆ ನಂ. 335/B-2.43 ಸೆಂಟ್ಸ್ ಒಟ್ಟು 6-51 ಸೆಂಟ್ಸ್, 2 ಪಂಪ್ ಸೆಟ್ ಹೊಂದಿರುವ ಜಮೀನು ಮಾರಾಟಕ್ಕಿದೆ.
99726 02950

**ಬೇಕಾಗಿದ್ದಾರೆ**
Diploma in Hardware Networking / Software
ಅನುಭವವುಳ್ಳಂತಹ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುತ್ತದೆ.
ಸ್ಥಳ: ಎ.ಕೆ. ಫಾರ್ಮಾ
ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.

**ಬೇಕಾಗಿದ್ದಾರೆ**
ಪೇಂಟ್ ಅಂಗಡಿಯಲ್ಲಿ SSLC / ITI ವಿದ್ಯಾರ್ಹತೆವುಳ್ಳ ಕೆಲಸಗಾರರು ಬೇಕಾಗಿದ್ದಾರೆ. (Only For Boys)
ಸಂಪರ್ಕಿಸಿ
80731 81729

**WANTED**
private tutors for home tuition with teaching experience mathematics and science, interested people can contact.
99459 88776
98862 11600

**ಮಳಿಗೆ ಬಾಡಿಗೆಗೆ ಇದೆ**
ದಾವಣಗೆರೆ ನಗರದ ಹಗೇದಿಬ್ಬ ಸರ್ಕಲ್ ಹತ್ತಿರ ಎಸ್.ಬಿ.ಐ. ATM ಪಕ್ಕದ ಮಳಿಗೆ ಅಳತೆ 12x12 ATM ಗಾಗಿ ಬಾಡಿಗೆಗೆ ದೊರೆಯುತ್ತದೆ. ಆಸಕ್ತರು
ಸಂಪರ್ಕಿಸಿ
82176 59075
95913 05919

**ಜಮೀನು ಮಾರಾಟಕ್ಕಿದೆ**
ಶಿವಮೊಗ್ಗ ರಸ್ತೆಗೆ ನಂದಿತಾವರೆ ಹತ್ತಿರ 2 ಎಕರೆ ಜಮೀನು ಮಾರಾಟಕ್ಕಿದೆ.
@ Rs 55 Laks/ Acre,
ಅಳತೆ 200x400
74112 50447

**WANTED**
Tally Operator
R.Empire
Shamanuru Road, Davanagere.
80501 42386

**HOUSE FOR RENT**
Single Bed Room ground floor for rent. One two Wheeler parking.Near Kalidasa circle, SS Hospital road, Jaya Nagara 'A' block, DAVANGERE-04.
M:94483 69055

**ಅಂಗಡಿ ಮಾಲೀಕರಿಗೆ ಸುವರ್ಣಾವಕಾಶ !!!**
ಅಂಗಡಿ ಮಾಲೀಕರು ತಮ್ಮ ಗ್ರಾಹಕರನ್ನು ಹೆಚ್ಚಿಸಿಕೊಳ್ಳಲು ಒಂದು ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ.
73532 43875

**REQUIRED**
GENTS AND LADIES WARDEN FOR HOSTEL
Location : DAVANGERE
CONTACT :
78999 17593

**ಬೇಕಾಗಿದ್ದಾರೆ**
1) ಅಡುಗೆ ಕೆಲಸಕ್ಕೆ-1 (ಮಹಿಳೆ)
2) ಆಸ್ಪತ್ರೆಯಲ್ಲೇ ಇದ್ದು ಅಡುಗೆ ಮಾಡಲು ಮಹಿಳಾ ಸಿಬ್ಬಂದಿ-1
3) ಚಿಕಿತ್ಸಾ ಥೆರಪಿಸ್ಟ್-2
(ಉಚಿತವಾಗಿ 45 ದಿನ ಟ್ರೈನಿಂಗ್ ಕೊಟ್ಟು ನಮ್ಮಲ್ಲೇ ಕೆಲಸಕ್ಕೆ ಸೇರಿಸಿಕೊಳ್ಳಲಾಗುವುದು)
ದಾವಣಗೆರೆಯ ಪ್ರತಿಷ್ಠಿತ ಆಸ್ಪತ್ರೆಗೆ ಮೇಲೆ ತಿಳಿಸಿದ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
86186 42929
08192-252228

**ಜಮೀನು ಮಾರಾಟಕ್ಕಿದೆ**
ತೋಳಹುಣಸೆ ಗ್ರಾಮದಲ್ಲಿ ರೇಷ್ಮೆ ಇಲಾಖೆಗೆ ಹೋಗುವ ದಾರಿಯಲ್ಲಿ ಒಂದು ಎಕರೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ
87674 87922

**ಕೆಲಸಕ್ಕೆ ಬೇಕಾಗಿದ್ದಾರೆ**
ಇಂಗ್ಲಿಷ್ ಓದಲುಬಲ್ಲ SSLC ಪಾಸಾದ/ ಫೇಲಾದ ಹುಡುಗ/ಹುಡುಗಿ ಕೆಲಸಕ್ಕೆ ಬೇಕಾಗಿದ್ದಾರೆ.
ರಾಜು ಹೋಮಿಯೋಪತಿಕ್ ಮೆಡಿಕಲ್ ಸೆಂಟರ್
ಎವಿಕೆ ಕಾಲೇಜ್ ರಸ್ತೆ, ವಾಸನ್ ಐ ಕೇರ್ ಪಕ್ಕ, ಟೈಟನ್ ಐ ಪ್ಲಸ್ ಎದುರು, ಪಿ.ಜೆ ಬಡಾವಣೆ, ದಾವಣಗೆರೆ.

**WANTED**
BANKING SECTOR, COMPUTER OPERATOR (MALE ONLY) Salary: 12000+ Incentive. Qualification : BBM/B.Com/ M.Com and Computer Knowledge,
Contact No: 78929 94180
Address: # 3367/1 Arunodaya, MCC B Block, Shamanuru Road, opp. Ashraya Hospital, Davanagere-577006

**ಬೇಕಾಗಿದ್ದಾರೆ**
Asst Mechanic: ITI Dieselmech/ Fitter, Service Advisor : Diploma in Automobile/ mec Exp: 2-3 years in Automobile workshop
ಸಂಪರ್ಕಿಸಿ: ವಿಜಯ ಆಟೋ ಸೇಲ್ಸ್ ಅಂಡ್ ಸರ್ವೀಸ್, ಪಿ.ಬಿ.ರೋಡ್, ದಾವಣಗೆರೆ.
94480 70098

**ಮನೆ ಮಾರಾಟಕ್ಕಿದೆ**
ಹೊಸದಾಗಿ ನಿರ್ಮಿಸಲಾದ 30x40 ಅಳತೆಯುಳ್ಳ ಕೆಳಗಡೆ 2BHK ಹಾಗೂ ಮೇಲೆ ಎರಡು ರೂಂಗಳು ಇರುವ ಮನೆ ಮಾರಾಟಕ್ಕಿದೆ. ಕುಂದುವಾಡ ರೋಡ್, ಶಿವಗಂಗಾ ಕಲ್ಯಾಣ ಮಂಟಪ ಹಿಂಭಾಗ
94815 53222

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 94837 64859
87620 58369, 90080 67049

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**HOUSE FOR RENT**
#5628/D-23, 2BHK 2nd floor, 4th Main, 6th Cross (left) Near Indoor Neharu Stadium S.S. Badavane 'B' Block House Name SHIVARATNA (Brokers Not Allowed)
94489 29509

**ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗ-ಹುಡುಗಿಯರು ಬೇಕಾಗಿದ್ದಾರೆ.
ಶ್ರೀಧರ್ ಅಕ್ವೇರಿಯಂ
ಚರ್ಚ್ ರಸ್ತೆ, ದಾವಣಗೆರೆ
63621 49155

**WANTED**
TEACHERS
B.A., B.Ed.-01
PUC, D.Ed.,-01
B.Sc., or B.A -01
Nisarga Convent School, SOG Colony, Davangere.
99862 26454, 87927 02690

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
81472 61158

**ಬೇಕಾಗಿದ್ದಾರೆ**
ದ್ವಿಚಕ್ರ ವಾಹನ ಇರುವ ಯುವಕರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ಇನ್ಸೆಂಟಿವ್ ದೊರೆಯುತ್ತದೆ.
ಸಂಪರ್ಕಿಸಿ
96864 12409
93796 58756

# 30 ರಂದು ಜಿಲ್ಲೆಯಲ್ಲಿ ಅದಾಲತ್

ದಾವಣಗೆರೆ, ಸೆ.26- ದಾವಣಗೆರೆ, ಹರಿಹರ, ಚನ್ನಗಿರಿ, ಹೊನ್ನಾಳಿ ಹಾಗೂ ಜಗಳೂರು ನ್ಯಾಯಾಲಯಗಳ ಆವರಣದಲ್ಲಿ ಇದೇ ದಿನಾಂಕ 30 ರ ಗುರುವಾರ ಮೆಗಾ ಲೋಕ್ ಅದಾಲತ್ ಆಯೋಜಿಸಲಾಗಿದೆ.

ಲೋಕ್ ಅದಾಲತ್ ಮೂಲಕ ಅತೀ ಹೆಚ್ಚು ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಗೊಳಿಸುವ ನಿಟ್ಟಿನಲ್ಲಿ ಈ ಅದಾಲತ್ ಏರ್ಪಾಡಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಪ್ರವೀಣ್ ನಾಯಕ್ ತಿಳಿಸಿದ್ದಾರೆ.

ಮೆಗಾ ಲೋಕ್ ಅದಾಲತ್‌ನಲ್ಲಿ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಕಡಿಮೆ ಖರ್ಚಿನಲ್ಲಿ ಶೀಘ್ರವಾಗಿ ಪರಿಹರಿಸಿಕೊಳ್ಳಲು ಸಾರ್ವಜನಿಕರಿಗೆ ಮೆಗಾ ಲೋಕ್ ಅದಾಲತ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ. ರಾಜೀಯಾಗಬಲ್ಲ ಎಲ್ಲಾ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳು, ಮೋಟರ್ ವಾಹನ ಅಪಘಾತ ಪರಿಹಾರ ಪ್ರಕರಣಗಳು, ಚೆಕ್ ಅಮಾನ್ಯ ಪ್ರಕರಣಗಳು, ಭೂಸ್ವಾಧೀನ ಪರಿಹಾರ ಪ್ರಕರಣಗಳು, ಬ್ಯಾಂಕ್ ಸಾಲ ವಸೂಲಾತಿ ಪ್ರಕರಣಗಳು, ಎಂ.ಎಂ.ಡಿ.ಆರ್ ಕಾಯ್ದೆಯಡಿಯ ಪ್ರಕರಣಗಳನ್ನುಲೋಕ್‌ಅದಾಲತ್‌ನಲ್ಲಿಪರಿಹರಿಸಿಕೊಳ್ಳಬಹುದು.

ವೈವಾಹಿಕ ಕುಟುಂಬ ನ್ಯಾಯಾಲಯದ ಪ್ರಕರಣಗಳು (ವಿಚ್ಛೇದನ ಹೊರತುಪಡಿಸಿ), ಪಿಂಚಣಿ ಪ್ರಕರಣಗಳು, ವೇತನ ಭತ್ಯೆಗೆ ಸಂಬಂಧಿಸಿದ ಪ್ರಕರಣಗಳು, ವಿದ್ಯುತ್ ಹಾಗೂ ನೀರಿನ ಶುಲ್ಕ, ಕೈಗಾರಿಕಾ ಕಾರ್ಮಿಕರ ವೇತನ, ಕಾರ್ಮಿಕ ವಿವಾದ ಇತ್ಯಾದಿ ಪ್ರಕರಣಗಳನ್ನು ಪರಸ್ಪರ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬಹುದು.

ನ್ಯಾಯಾಲಯದ ಸಂಪೂರ್ಣ ಶುಲ್ಕವನ್ನು ಮರುಪಾವತಿ ಮಾಡಲಾಗುವುದು. ಕಕ್ಷಿಗಾರರು ಭೌತಿಕವಾಗಿ ಅಥವಾ ವಿಡಿಯೋ ಕಾನ್ಫರೆನ್ಸ್ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಪ್ರಕರಣಗಳನ್ನು ಲೋಕ್ ಅದಾಲತ್ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದು.

ವಿವರಕ್ಕೆ ದಾವಣಗೆರೆ ಹಳೆಯ ನ್ಯಾಯಾಲಯ ಸಂಕೀರ್ಣದಲ್ಲಿರುವ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ದೂರವಾಣಿ : 08192-296364, ತಾಲ್ಲೂಕು ಕಾನೂನು ಸೇವಾ ಸಮಿತಿಗಳಾದ ಹರಿಹರ 08192-296885, ಹೊನ್ನಾಳಿ 08188-251732, ಚನ್ನಗಿರಿ 08189-229195 ಮತ್ತು ಜಗಳೂರು 08196-227600 ಇಲ್ಲಿ ಸಂಪರ್ಕಿಸಬಹುದು.

## ಇಂದಿನ ಬಂದ್‌ಗೆ ಬೆಂಬಲ

ರೈತರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಸಂಯುಕ್ತ ಕಿಸಾನ್ ಮೋರ್ಚಾ ಕರೆ ಕೊಟ್ಟಿರುವ ಇಂದಿನ ಭಾರತ್ ಬಂದ್‌ಗೆ ದಾವಣಗೆರೆ ಮೊಬೈಲ್ ಮೆಕ್ಯಾನಿಕ್ಸ್ ಅಸೋಸಿಯೇಷನ್ ಬೆಂಬಲ ವ್ಯಕ್ತಪಡಿಸಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಶೇರ್ ಅಲಿ ಬೇಗ್ ತಿಳಿಸಿದ್ದಾರೆ.

# ದೈವದತ್ತವಾದ ಆಹಾರ ಸೇವಿಸಿ ಆರೋಗ್ಯ ಕಾಪಾಡಿಕೊಳ್ಳಿ

ಹರಪನಹಳ್ಳಿ, ಸೆ.26- ಪೌಷ್ಟಿಕಾಂಶದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸರ್ಕಾರಗಳು ದೈವದತ್ತವಾದ ಆಹಾರದ ಬಗ್ಗೆ ಜಾಗೃತಿ ಮೂಡಿಸಿ ಉತ್ತಮ ಸಮಾಜವನ್ನು ನಿರ್ಮಾಣ ಮಾಡುತ್ತಿ ರುವುದು ಉತ್ತಮ ಮಾರ್ಗ ವಾಗಿದೆ ಎಂದು ಸಿವಿಲ್ ಹಿರಿಯ ನ್ಯಾಯಾಧೀಶರಾದ ಎಂ.ಭಾರತಿ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯತಿ ರಾಜೀವ್ ಗಾಂಧಿ ಸಭಾಂಗಣದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆರೋಗ್ಯ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಪೌಷ್ಟಿಕ ಅಹಾರ ದಿನಾಚರಣೆ ಕುರಿತು ಕಾನೂನು ಅರಿವು ಕಾರ್ಯಕ್ರಮವನ್ನುಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಉತ್ತಮ ಆರೋಗ್ಯ, ಸದೃಢ ದೇಹ ಹೊಂದಲು ಉತ್ತಮವಾದ ಆಹಾರ ಸೇವನೆಯಿಂದ ಮಾತ್ರ ಸಾಧ್ಯ. ಉತ್ತಮ ಆರೋಗ್ಯ ನಮ್ಮ ಜೀವನದ ಒಂದು ಆಧಾರ ಸ್ತಂಭ. ನಾವು ಸಮಾಜದಲ್ಲಿ ಆಸ್ತಿ ಅಂತಸ್ತು ಮಾಡಿದರೂ ಸಹ ನಮಗೆ ಆರೋಗ್ಯದಲ್ಲಿ ಏರುಪೇರು ಕಂಡುಬಂದರೆ ಏನು ಪ್ರಯೋಜನ. ದೇಹಕ್ಕೆ ಆರೋಗ್ಯಯುತ ಆಹಾರ ಸೇವನೆಯಿಂದ ಸದೃಢ ದೇಹ ಬೆಳೆಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದರು.



ಹರಪನಹಳ್ಳಿಯ ನ್ಯಾಯಾಧೀಶರಾದ ಎಂ.ಭಾರತಿ ಕಿವಿಮಾತು

ಕಿರಿಯ ಸಿವಿಲ್ ನ್ಯಾಯಾಧೀಶರಾದ ಪಕ್ಕೀರವ್ವ ಕೆಳಗೇರಿ, ವಕೀಲರ ಸಂಘದ ಅಧ್ಯಕ್ಷ ಕೆ.ಚಂದ್ರೇಗೌಡ, ಆರೋಗ್ಯ ಅಧಿಕಾರಿ ದೇವರಾಜ್ ಮಾತನಾಡಿದರು.ಸರ್ಕಾರಿ ಅಭಿಯೋಜಕರಾದ ಎನ್.ಮಿನಾಕ್ಷಿ, ಅಪರ ಸರ್ಕಾರಿ ವಕೀಲ ವಿ.ಜಿ.ಪ್ರಕಾಶ್ ಗೌಡ, ವಕೀಲರ ಸಂಘದ ಕಾರ್ಯದರ್ಶಿ ಕೆ.ಬಸವರಾಜ್, ಇಓ ಕೆ.ಆರ್. ಪ್ರಕಾಶ್, ವಕೀಲರುಗಳಾದ ಎಂ.ಮೃತ್ಯುಂಜಯ್ಯ, ಮುತ್ತಿಗಿ ರೇವಣಸಿದ್ದಪ್ಪ, ಜಿ.ಎಸ್. ತಿಪ್ಪೇಸ್ವಾಮಿ, ನಂದೀಶ್ ನಾಯ್ಕ, ಕ್ಷೇತ್ರ ಶಿಕ್ಷಣ ಆರೋಗ್ಯ ಕೇಂದ್ರದ ಅಧಿಕಾರಿಗಳಾದ ಭುವನೇಶ್ವರಿ, ಗೌರಮ್ಮ, ಅಂಗನವಾಡಿ ಕಾರ್ಯಕರ್ತೆಯರಾದ ವೀರಮ್ಮ ಎಸ್, ಮುಬೀನಾ, ಜಲಜಾ, ತ್ರಿವೇಣಿ, ಮೈಮುನ್ನೀಸಾ, ಮಹಾದೇವಿ, ಅಂಬುಜಾ, ಹನುಮಕ್ಕ, ಸುನಿತಾ, ಪಾರ್ವತಿ, ಚಂದ್ರಮ್ಮ, ದುರ್ಗಮ್ಮ, ಉಮಾ, ರೇಣುಕಾ, ಭಾಗೀರತಿ, ಶಬೀನಾ, ಸಾವಿತ್ರಿ, ಎಂ.ರೇಣುಕಾ, ಸರಿತಾ, ಜ್ಯೋತಮ್ಮ, ಹಾಲಮ್ಮ, ರುಕ್ಸಾನಾ, ಯು. ಕೊಟ್ರಮ್ಮ, ಉಚ್ಚೆಂಗೆಮ್ಮ, ಕೊಟ್ರಮ್ಮ, ಸೀಮಾ, ಉಷಾ, ಬಸಮ್ಮ, ಮಂಗಳಗೌರಮ್ಮ, ಜ್ಯೋತಿ ನ್ಯಾಯಾಲಯದ ಸಿಬ್ಬಂದಿಗಳಾದ ರೇವಣಸಿದ್ದಪ್ಪ, ಬಸವರಾಜ್, ಕೊಟ್ರೇಶ್ ಸೇರಿದಂತೆ ಇತರರು ಇದ್ದರು.

### ಮಕ್ಕಳಿಗೆ ಎದೆ ಹಾಲು ಶ್ರೇಷ್ಠ

"ಮಕ್ಕಳಿಗೆ ಎದೆ ಹಾಲು ಶ್ರೇಷ್ಠವಾಗಿದ್ದು, ತಾಯಂದಿರು ತಮ್ಮ ಸೌಂದರ್ಯ ಹಾಳಾಗುತ್ತದೆ ಎಂದು ಮಕ್ಕಳಿಗೆ ಹಸುವಿನ ಹಾಲು ಸೇರಿದಂತೆ ಇತರೆ ಹಾಲನ್ನು ಕುಡಿಸಬೇಡಿ. ಗರ್ಭಿಣಿಯರು ಮತ್ತು ಕಿಶೋರಿಯರು ಹಸಿರು ತರಕಾರಿಯನ್ನು ಸೇವಿಸಿ, ಕಬ್ಬಿಣದಂತೆ ಗಟ್ಟಿಯಾಗಿಸುವ ಆಹಾರ ಪದ್ಧತಿಯನ್ನು ರೂಢಿಸಿಕೊಳ್ಳಿ, ಜೊತೆಗೆ ಪೌಷ್ಟಿಕ ಆಹಾರ ಸೇವಿಸಬೇಕು, ಕಾಲಕಾಲಕ್ಕೆ ಮಕ್ಕಳಿಗೆ ಚುಚ್ಚುಮದ್ದು ಹಾಕಿಸಬೇಕು.

- ಸರೋಜ ನವಲೆ, ಮೇಲ್ವಿಚಾರಕರು

# ಖಾಸಗಿಯಲ್ಲಿ ಹೆಸರು, ಸರ್ಕಾರಿಯಲ್ಲಿ ಕಲಿಕೆ

**(1ನೇ ಪುಟದಿಂದ)** ಶಾಲೆಗಳಲ್ಲಿ 24,346, ಅನುದಾನಿತ ಶಾಲೆಗಳಲ್ಲಿ 7,645, ಅನುದಾನ ರಹಿತ ಪ್ರಾಥಮಿಕ ಶಾಲೆಗಳಲ್ಲಿ 19,570 ಮತ್ತು ಸಮಾಜ ಕಲ್ಯಾಣ ಇಲಾಖೆ ಮತ್ತಿತರೆ ಶಾಲೆಗಳಲ್ಲಿ 1,757 ಮಕ್ಕಳಿದ್ದಾರೆ.

ಸರ್ಕಾರಿ ಪ್ರೌಢಶಾಲೆಗಳಲ್ಲಿ 25,611, ಅನುದಾನಿತ ಪ್ರೌಢಶಾಲೆಗಳಲ್ಲಿ 24,470, ಅನುದಾನ ರಹಿತ ಪ್ರೌಢಶಾಲೆಗಳಲ್ಲಿ 22,390 ಹಾಗೂ ಸಮಾಜ ಕಲ್ಯಾಣ ಇಲಾಖೆ ಮತ್ತಿತರೆ ಶಾಲೆಗಳಲ್ಲಿ 4,743 ವಿದ್ಯಾರ್ಥಿಗಳು ದಾಖಲಾಗಿದ್ದಾರೆ.

ಈ ಸಮಸ್ಯೆ ಕುರಿತು ಪತ್ರಿಕೆಯೊಂದಿಗೆ ಮಾತನಾಡಿರುವ ಡಿಡಿಪಿಐ ಸಿ.ಆರ್. ಪರಮೇಶ್ವರಪ್ಪ, ಮಕ್ಕಳ ದಾಖಲಾತಿ ಹಾಗೂ ಹಾಜರಾತಿ ಉತ್ತಮವಾಗಿದೆ. ಶಾಲಾರಂಭದ ನಂತರ ಕೊರೊನಾದಿಂದ ಯಾವುದೇ ತೊಡಕು ಎದುರಾಗಿಲ್ಲ. ಮಕ್ಕಳ ದಾಖಲಾತಿಗೆ ಇನ್ನೂ ಸಮಯ ಇದೆ. ದಾಖಲಾತಿಗೆ ಸಂಬಂಧಿಸಿದಂತೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ.

ಕೆಲವೇ ಖಾಸಗಿ ಶಾಲೆಗಳನ್ನು ಹೊರತುಪಡಿಸಿದರೆ, ಉಳಿದೆಲ್ಲ ಶಾಲೆಗಳಲ್ಲಿ 6ರಿಂದ ಹತ್ತನೇ ತರಗತಿಗೆ ನೇರ ಪಾಠಗಳು ನಡೆಯುತ್ತಿವೆ. ಪೋಷಕರು ಹಾಗೂ ಮಕ್ಕಳು ಉತ್ಸಾಹದಿಂದ ಶಾಲೆಗೆ ಬರುತ್ತಿದ್ದಾರೆ. ಮಕ್ಕಳು ಪೂರ್ಣ ಪ್ರಮಾಣದಲ್ಲಿ ಶಾಲೆಗಳಿಗೆ ಬರುತ್ತಿದ್ದಾರಾದರೂ, ಖಾಸಗಿ ಶಾಲೆಗಳಿಂದ ವರ್ಗಾವಣೆ ಪತ್ರ ಇನ್ನೂ ಸಿಗದ ಕಾರಣ ಒಟ್ಟು ದಾಖಲಾತಿ ಅಂಕಿ-ಅಂಶದಲ್ಲಿ ಕೊರತೆ ಇದೆ ಎಂದು ಹೇಳಿದ್ದಾರೆ.

## ಕಡ್ಡಾಯ ಪಾಸ್‌ನಿಂದ ವಿದ್ಯಾರ್ಥಿಗಳಿಗೆ ಸಂಕಷ್ಟ

**ಆನ್‌ಲೈನ್ ಕಲಿಕೆ ಕೈಗೆಟುಕದೆ ಮಕ್ಕಳು ಅತಂತ್ರ**

ಕೊರೊನಾ ಸಮಯದಲ್ಲಿ ಸರ್ಕಾರ ಹಾಗೂ ಖಾಸಗಿಯವರು ಟಿ.ವಿ. ಹಾಗೂ ಆನ್‌ಲೈನ್ ಮೂಲಕ ಪಾಠಕ್ಕೆ ವ್ಯವಸ್ಥೆ ಮಾಡಿದ್ದರು. ಟಿ.ವಿ., ಅರೆಬರೆಯ ಶಾಲಾರಂಭದಿಂದಲೇ ಮಕ್ಕಳು ಕಲಿತಿದ್ದಾರೆ ಎಂದು ಭಾವಿಸಿರುವ ಸರ್ಕಾರ, ಮಕ್ಕಳನ್ನು ಎರಡು ತರಗತಿ ದಾಟುವಂತೆ ಮಾಡಿದೆ. ಆದರೆ, ಸಾಕಷ್ಟು ಮಕ್ಕಳಿಗೆ ಆನ್‌ಲೈನ್ ಪಾಠ ದಕ್ಕಿಲ್ಲ. ಕೆಲವರಂತೂ ಕಲಿತ ಪಾಠವನ್ನೆಲ್ಲಾ ಸಂಪೂರ್ಣ ಮರೆತಿದ್ದಾರೆ. ಇವರು ಸರ್ಕಾರಿ ಲೆಕ್ಕದಲ್ಲಿ ಪಾಸ್ ಆಗಿದ್ದರೆ, ಕಲಿಕೆಯಲ್ಲಿ ಫೇಲ್ ಆಗಿದ್ದಾರೆ. ಆಗಿದ್ದು ಆಗಲಿ, ಇನ್ನೊಂದು ವರ್ಷ ಹಳೆ ತರಗತಿಯಲ್ಲೇ ಕಲಿಯುತ್ತೇನೆ ಎಂದರೆ ಸರ್ಕಾರ ಅದಕ್ಕೆ ಕೊಕ್ಕೆ ಹಾಕಿದೆ!

ಕಡ್ಡಾಯ ಪಾಸ್ ಇರುವುದರಿಂದ ಹಳೆಯ ತರಗತಿಯ ಪುನರಾವರ್ತನೆ ಸಾಧ್ಯವಿಲ್ಲದಂತಾಗಿದೆ ಎಂದು ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಎಲ್ಲ ಸರಿಯಾಗಿದ್ದಾಗಲೇ ಸಾಕಷ್ಟು ಮಕ್ಕಳಿಗೆ ವಿಜ್ಞಾನ ಹಾಗೂ ಗಣಿತ ಕಬ್ಬಿಣದ ಕಡಲೆಯಾಗಿದ್ದವು. ಒಂದೆಡೆ ಎರಡು ವರ್ಷ ಪಾಠ ಸರಿಯಾಗಿ ನಡೆದಿಲ್ಲ, ಈಗ ಇನ್ನೂ ಉನ್ನತ ಹಂತದ ಕಲಿಕೆಗೆ ಮಕ್ಕಳನ್ನು ದೂಡಿರುವುದು ವಿವೇಚನಾ ರಹಿತ ಕ್ರಮವಾಗಿದೆ. ವರ್ಷದ ಕಡ್ಡಾಯ ಪಾಸ್, ಮಕ್ಕಳನ್ನು ಜೀವನವಿಡೀ ಕಲಿಕೆಯಿಂದ ಫೇಲ್ ಆಗುವಂತೆ ಮಾಡುವ ಅಪಾಯ ತಂದಿದೆ ಎಂಬ ಕಳವಳ ಈಗ ಮೂಡುತ್ತಿದೆ.

# ಅಹಿಂದ ವರ್ಗದವರ ಅಧಿಕಾರ ಮೊಟಕುಗೊಳಿಸಲು ಮೀಸಲಾತಿಗೆ ಕಡಿವಾಣ ಹಾಕಿದ ಬಿಜೆಪಿ ಸರ್ಕಾರ

ಹೊನ್ನಾಳಿ, ಸೆ.26- ಪ್ರಜಾಪ್ರಭುತ್ವದಡಿಯಲ್ಲಿ ರಾಜ್ಯದ ಆಡಳಿತ ನಡೆಸುವಂತಿರಬೇಕೇ ಹೊರತು, ಜಾತಿ ಮುಖ್ಯವಾಗ ಬಾರದು ಎಂದಿರುವ ಸಮಾಜದ ಮುಖಂಡ ಡಾ.ಈಶ್ವರನಾಯ್ಕ, ಅಹಿಂದ ಸಂಘಟನೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಸಿದ್ದರಾಮಯ್ಯನವರ ಕೈ ಬಲಪಡಿಸಬೇಕು ಎಂದು ಕರೆ ನೀಡಿದ್ದಾರೆ.



ಹೊನ್ನಾಳಿಯ ಹಿಂದುಳಿದ ಜಾತಿಗಳ ಒಕ್ಕೂಟದ ಸಭೆಯಲ್ಲಿ ಕಿಡಿ ಕಾರಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ

ಇಲ್ಲಿನ ಮೋಹನ್‌ಎನ್‌ಕ್ಲೇನಲ್ಲಿ ತಾಲ್ಲೂಕು ಮಟ್ಟದ ಹಿಂದುಳಿದ ಜಾತಿಗಳ ಒಕ್ಕೂಟದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇದೇ ದಿನಾಂಕ 29ರ ಬುಧವಾರ ದಾವಣಗೆರೆಯಲ್ಲಿ ನಡೆಯಲಿರುವ ಅಗಲಿದ ಕುರುಬ ಸಮಾಜದ ಮುಖಂಡರಿಗೆ ಸಲ್ಲಿಸುವ ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ಹೊನ್ನಾಳಿ ತಾಲ್ಲೂಕಿನ ಸಮಾಜ ಬಾಂಧವರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಡಾ. ಈಶ್ವರ ನಾಯ್ಕ ಕರೆ ನೀಡಿದ್ದಾರೆ.

ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ದ್ಯಾಮಪ್ಪ ಸಮಾರಂಭ ಉದ್ಘಾಟಿಸಿ ಮಾತನಾಡಿ, ಹೊನ್ನಾಳಿ ಹುಲಿ ಎನ್ನುವಂತಿದ್ದ ಮಾಜಿ ಶಾಸಕ ಕಾಡಸಿದ್ದಪ್ಪನವರ ಹೆಸರನ್ನು ಮತ್ತೆ ಉಳಿಸಿಕೊಂಡು ಬರುವಂತ ನಾಯಕ ತಾಲ್ಲೂಕಿನಲ್ಲಿ ಬೆಳೆಯಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಮಾತನಾಡಿ, ಬಿಜೆಪಿ ಸರ್ಕಾರವು ಅಹಿಂದ ವರ್ಗ ದವರ ಅಧಿಕಾರ ಮೊಟಕುಗೊಳಿಸುವ ಮೂಲಕ ಮೀಸಲಾತಿಗೆ ಕಡಿವಾಣ ಹಾಕಿದ್ದು, ತಾಲ್ಲೂಕಿನಲ್ಲಿ ನಮ್ಮಲ್ಲಿನ ವೈಮನಸ್ಸುಗಳನ್ನು ಕೈಬಿಟ್ಟು ಸಂಘಟನಾತ್ಮಕ ಜಾಗೃತಿ ಮೂಡಿಸಿಕೊಳ್ಳಬೇಕಾದ ಅವಶ್ಯಕತೆ ಇದೆ ಎಂದರು.

ತಾಲ್ಲೂಕು ಅಹಿಂದ ಮುಖಂಡ ಎಂ.ರಮೇಶ್, ಕುರುಬ ಸಮಾಜದ ಜಿಲ್ಲಾ ಕಾರ್ಯದರ್ಶಿ ಲೋಕಿಕೆರೆ ಸಿದ್ದಪ್ಪ, ತಾಲ್ಲೂಕು ಕುರುಬ ಸಮಾಜದ ಕಾರ್ಯಾಧ್ಯಕ್ಷ ಬಿ.ಸಿದ್ದಪ್ಪ ಮಾತನಾಡಿದರು.

ಸಭೆಯಲ್ಲಿ ಅಹಿಂದ ಮುಖಂಡರಾದ ರಾಜಕುಮಾರ್, ಎಂ.ಆರ್. ಮಹೇಶ್, ಪರಶುರಾಮಪ್ಪ, ಉಪ್ಪಾರ ಹಾಲೇಶ್, ಆರ್.ನಾಗಪ್ಪ, ಚೀಲೂರು ವಾಜೀದ್, ಎ.ಕೇಶವಮೂರ್ತಿ, ಎಂ.ರಮೇಶ್, ದಿಡಗೂರು ರುದ್ರೇಶ್, ಹೆಚ್.ಬಿ. ಶಿವಯೋಗಿ, ಕೃಷ್ಣಮೂರ್ತಿ, ಸುಲೈಮಾನ್, ಹಾಲೇಶ್, ದೂದ್ಯಾನಾಯ್ಕ, ಕ್ಯಾಸಿನಕೇರಿ ಶೇಖರಪ್ಪ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಜಿಲ್ಲಾ ಮುಖಂಡರಾದ ವೆಂಕಟೇಶ್, ಶ್ರೀನಿವಾಸ್, ದ್ಯಾಮಪ್ಪ, ರುದ್ರೇಶ್, ಲಿಂಗರಾಜು, ಚೌಡಪ್ಪ, ಮಂಜಣ್ಣ, ಶ್ರೀನಿವಾಸ್ ಇನ್ನಿತರರಿದ್ದರು.

# ಚಿತ್ರ ಕಲಾವಿದರನ್ನು ಗುರುತಿಸಿ, ಪ್ರೋತ್ಸಾಹಿಸುವ ಸಾಂಘಿಕ ಪ್ರಯತ್ನ ಅಗತ್ಯ

## 'ಅಕ್ಕ ಅಣ್ಣ ಬಣ್ಣ' ಏಕ ವ್ಯಕ್ತಿ ಚಿತ್ರಕಲಾ ಪ್ರದರ್ಶನಕ್ಕೆ ಚಾಲನೆ ನೀಡಿದ ಮಂಜುನಾಥ ಸ್ವಾಮಿ

ದಾವಣಗೆರೆ, ಸೆ.26- ಶಿಕ್ಷಕ, ಕಲಾವಿದ ಶಾಂತಯ್ಯ ಪರಡಿಮಠ ಅವರ ಅವರ 'ಅಕ್ಕ ಅಣ್ಣ ಬಣ್ಣ' ಏಕ ವ್ಯಕ್ತಿ ಚಿತ್ರಕಲಾ ಪ್ರದರ್ಶನಕ್ಕೆ ಭಾನುವಾರ ನಗರದ ತರಳಬಾಳು ಬಡಾವಣೆಯಲ್ಲಿರುವ ಸ್ವಸ್ತಿ ಆರ್ಟ್ ಗ್ಯಾಲರಿಯಲ್ಲಿ ಚಾಲನೆ ನೀಡಲಾಯಿತು.



ಡಿಡಿಪಿಐ ಕಚೇರಿಯ ಸರ್ವಶಿಕ್ಷಣ ಅಭಿಯಾನದ ಉಪಯೋಜನೆ ಸಮನ್ವಯ ಅಧಿಕಾರಿ ಮಂಜುನಾಥಸ್ವಾಮಿ ಮೂರು ದಿನಗಳ ಕಾಲ ನಡೆಯುವ ಈ ಚಿತ್ರ ಕಲಾ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿ, ದಾವಣಗೆರೆಯಲ್ಲಿ ಸಾಕಷ್ಟು ಚಿತ್ರಕಲಾವಿದರಿದ್ದು, ಅವರನ್ನು ಗುರುತಿಸಿ ಪ್ರೋತ್ಸಾಹಿಸುವ ಸಾಂಘಿಕ ಪ್ರಯತ್ನ ನಡೆಯಬೇಕಿದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ದಾವಣಗೆರೆ ವಿಶ್ವವಿದ್ಯಾನಿಲಯ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಶಿವಕುಮಾರ ಕಣಸೋಗಿ, ಪತ್ರಕರ್ತ ಸದಾನಂದ ಹೆಗಡೆ, ಮಾತನಾಡಿದರು.

ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಮನೋಹರ ಎಸ್.ಚಿಗಟೇರಿ ಮಾತನಾಡಿದರು. ಇಎನ್‌ಟಿ ತಜ್ಞ ಡಾ.ಸಿದ್ದಲಿಂಗಯ್ಯ ಅಧ್ಯಕ್ಷತೆ ವಹಿಸಿದ್ದರು.

ಅನುಶ್ರೀ ಬಳಗದ ಧ್ಯಾನ್, ಗಾನವಿ, ಪರಿಣಿಕ ಮತ್ತು ವಿಹಾನ್ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಶ್ರೀ ಜಯ ವಿಭವ ವಿದ್ಯಾಸಂಸ್ಥೆಯ ಸದಸ್ಯ ಎಂ.ಕೆ. ಬಕ್ಕಪ್ಪ, ಸ್ವಸ್ತಿ ಆರ್ಟ್ ಗ್ಯಾಲರಿ ಮೇಲ್ವಿಚಾರಕ ರವಿ ಶ್ಯಾಮ ಹುದ್ದಾರ, ಅನುಶ್ರೀ ಸಂಗೀತ ಶಾಲೆಯ ಮೇಲ್ವಿಚಾರಕರಾದ ವೀಣಾ ಹೆಗಡೆ ಇತರರು ಉಪಸ್ಥಿತರಿದ್ದರು. ದತ್ತಾತ್ರೇಯ ಭಟ್ ನಿರೂಪಿಸಿದರು.

### ಗಮನ ಸೆಳೆದ ಕಲಾಕೃತಿಗಳು

ಶಾಂತಯ್ಯ ಪರಡಿಮಠ ಅವರು ರಚಿಸಿರುವ ಅನೇಕ ಕಲಾಕೃತಿಗಳು ಹನ್ನೆರಡನೇ ಶತಮಾನದ ಶರಣ ಚಳವಳಿಯನ್ನು ನೆನಪಿಸುವಂತಿದ್ದವು. ಅಕ್ಕಮಹಾದೇವಿ, ಬಸವಣ್ಣನ ಚಿತ್ರಗಳು ಸೇರಿದಂತೆ, ಮ್ಯಾನ್‌ಹೋಲ್ ಸ್ವಚ್ಛಗೊಳಿಸುವ ಕಾರ್ಮಿಕನೊಬ್ಬ ಒಳಗಿನಿಂದ ಕತ್ತಲೆಯಿಂದಲೇ ಹೊರಗೆ ಕಾಣುವ ಬೆಳಕು ಕಾಣುವ ಚಿತ್ರ, ಕಟ್ಟಡ ಕಾರ್ಮಿಕ ಹೆಂಗಸು ತನ್ನ ತಲೆಯ ಮೇಲೆ ಭಾರವಾದ ಇಟ್ಟಿಗೆಗಳನ್ನು ಹೊತ್ತಿದ್ದರೂ ಮುಗುಳ್ನಗುವ ಚಿತ್ರ, ಕೊಳಲನೂದುವ ಬಸವೇಶ್ವರರ ವಿಭಿನ್ನ ಚಿತ್ರ, ನೇಪಾಳಿ ಹೆಂಗಸು ಹೀಗೆ ಒಂದೊಂದು ಚಿತ್ರಗಳು ವಿಶಿಷ್ಟತೆಯಿಂದ ಕೂಡಿ, ನೋಡುಗರನ್ನು ಆಕರ್ಷಿಸಿದವು.

## ನಗರದಲ್ಲಿ ಎಲ್‌ಐಸಿ ಪ್ರತಿನಿಧಿಗಳ ಸಭೆ

ಎಲ್‌ಐಸಿ ಶಾಖೆ 1ರ ಪ್ರತಿನಿಧಿಗಳ ಸಂಘದ 15ನೇ ವಾರ್ಷಿಕ ಮಹಾ ಸಭೆಯು ಇಂದು ಬೆಳಿಗ್ಗೆ 10-30ಕ್ಕೆ ಸಂಘದ ಸಮುದಾಯ ಭವನದಲ್ಲಿ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಶಿವಮೊಗ್ಗ ವಿಭಾಗದ ಹಿರಿಯ ವಿಭಾಗಾಧಿಕಾರಿಗಳಾದ ಜಯಸಿಂಹನ್, ಎಲ್‌ಐಸಿ ದಕ್ಷಿಣ ಮಧ್ಯವಲಯದ ಮಾರುಕಟ್ಟೆ ವ್ಯವಸ್ಥಾಪಕ ಯಶವಂತ ಎಂ. ಮುರಾಳ್ ಆಗಮಿಸುವರು ಎಂದು ಕಾರ್ಯದರ್ಶಿ ಡಿ.ಸಿ. ಶಿವಕುಮಾರ್ ತಿಳಿಸಿದ್ದಾರೆ.

ಸಂಘದ ಅಧ್ಯಕ್ಷ ಎಲ್. ಮಂಜುನಾಥ್ ವಿಷಯ ಮಂಡಿಸಲಿದ್ದಾರೆ.

## ಇಂದಿನ ಬಂದ್‌ಗೆ ಸಾಮಾಜಿಕ ಸಂಘರ್ಷ ಸಮಿತಿ ಬೆಂಬಲ

ಇಂದಿನ ಭಾರತ ಬಂದ್‌ಗೆ ಸಾಮಾಜಿಕ ಸಂಘರ್ಷ ಸಮಿತಿ ಬೆಂಬಲ ವ್ಯಕ್ತಪಡಿಸಿದೆ. ಇಂದು ಬೆಳಿಗ್ಗೆ 10 ಗಂಟೆಗೆ ಗಾಂಧಿನಗರದಿಂದ ಸಮಿತಿ ಕಾರ್ಯಕರ್ತರು ಮೆರವಣಿಗೆ ಮೂಲಕ ಉಪವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ಮನವಿ ಸಲ್ಲಿಸುವುದಾಗಿ ಸಮಿತಿ ಜಿಲ್ಲಾಧ್ಯಕ್ಷ ಪಿ. ತಿಪ್ಪೇರುದ್ರಪ್ಪ ತಿಳಿಸಿದ್ದಾರೆ.

## ನೀರ್ಥಡಿ : ಪ್ರವಾಸೋದ್ಯಮ ದಿನಾಚರಣೆ

ಜಿಲ್ಲಾ ಪಂಚಾಯತ್, ಪ್ರವಾಸೋದ್ಯಮ ಇಲಾಖೆ, ಆರೋಗ್ಯ - ಕುಟುಂಬ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದೊಂದಿಗೆ ನೀರ್ಥಡಿಯಲ್ಲಿ ವಿಶ್ವ ಪ್ರವಾಸೋದ್ಯಮ ದಿನಾಚರಣೆ ನಡೆಯಲಿದೆ.

ಬೆಳಿಗ್ಗೆ 11 ಗಂಟೆಗೆ ಶ್ರೀ ರಂಗನಾಥಸ್ವಾಮಿ ದೇವಸ್ಥಾನದ ಆವರಣದಲ್ಲಿ ಸ್ವಚ್ಛತಾ ಅಭಿಯಾನ ಹಾಗೂ ಆರೋಗ್ಯ ಅರಿವು ಕಾರ್ಯಕ್ರಮ ನಡೆಯಲಿದೆ. ನಂತರ ಮಧ್ಯಾಹ್ನ 1.30 ರಿಂದ ವೇದಿಕೆ ಕಾರ್ಯಕ್ರಮ ನಡೆಯುವುದು.

ಅಧ್ಯಕ್ಷತೆ : ಪ್ರೊ. ಎನ್. ಲಿಂಗಣ್ಣ. ಉಪಸ್ಥಿತಿ : ಆನಂದ್‌ಸಿಂಗ್, ಜಿ.ಎಂ. ಸಿದ್ದೇಶ್ವರ. ಮುಖ್ಯ ಅತಿಥಿಗಳು: ಶಾಮನೂರು ಶಿವಶಂಕರಪ್ಪ, ಶ್ರೀಮತಿ ಮಮತ ಹೊಸಗೌಡರ್, ಗಿರೀಶ್ ಬಿ.ಎನ್, ಡಾ. ವಿಜಯಮಹಾಂತೇಶ್ ಬಿ. ದಾನಮ್ಮನವರ್, ಸಿ.ಬಿ. ರಿಷ್ಯಂತ್ ಮತ್ತಿತರರು.

**ಬೇಕಾಗಿದ್ದಾರೆ**

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.


ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

ಶಾಂತಲಾ ವೆಡ್ಡಿಂಗ್ ಮಾಲ್

ಚಾಮರಾಜಪೇಟೆ, ದಾವಣಗೆರೆ - 577 001.

96861 95327







## ಚಪ್ಪಲಿಯಲ್ಲಿ ಗ್ಯಾಡ್ಜೆಟ್ ಅಳವಡಿಸಿ ಕಾಪಿಗೆ ಯತ್ನ

ಜೈಪುರ, ಸೆ. 26- ರಾಜಸ್ಥಾನದ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಚಪ್ಪಲಿಯಲ್ಲಿ ಗ್ಯಾಡ್ಜೆಟ್ ಅಳವಡಿಸಿಕೊಂಡು ಕಾಪಿ ಹೊಡೆಯುವ ಯತ್ನ ನಡೆಸಿದ್ದು ಬೆಳಕಿಗೆ ಬಂದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಐವರನ್ನು ಬಂಧಿಸಲಾಗಿದೆ.

ದೌಸೌ ಹಾಗೂ ಜೈಪುರಗಳಲ್ಲಿ ಮೂವರು ಚಪ್ಪಲಿಗಳಲ್ಲಿ ಸಿಮ್ ಕಾರ್ಡ್ ಹೊಂದಿರುವ ಉಪಕರಣ ಅಳವಡಿಸಿಕೊಂಡಿದ್ದರು. ಕಿವಿಗಳಲ್ಲಿ ಸುಲಭವಾಗಿ ಕಾಣದಂತಹ ಬ್ಲೂ ಟೂತ್ ಉಪಕರಣ ಅಳವಡಿಸಿಕೊಂಡಿದ್ದರು. ಇವರು ಹಾಗೂ ನೆರವು ನೀಡುತ್ತಿದ್ದ ಇನ್ನಿಬ್ಬರನ್ನು ಬಂಧಿಸಲಾಗಿದೆ. ತಲಾ 6 ಲಕ್ಷ ರೂ. ಪಡೆದು ಈ ವಂಚನೆಗೆ ತಂಡ ನೆರವಾಗುತ್ತಿತ್ತು ಎಂದು ಪೊಲೀಸರು ಹೇಳಿದ್ದಾರೆ.

## ದೇಶದಲ್ಲಿ 28,326 ಸೋಂಕಿತರು ಪತ್ತೆ

ನವದೆಹಲಿ, ಸೆ. 26 – ದೇಶದಲ್ಲಿ ಭಾನುವಾರ 28,326 ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಇದೇ ದಿನ 260 ಜನ ಸೋಂಕಿನಿಂದ ಸಾವನ್ನಪ್ಪಿರುವುದಾಗಿ ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.ಸಕ್ರಿಯ ಕೊರೊನಾ ಸೋಂಕಿತರ ಸಂಖ್ಯೆ ಈಗ 3.03 ಲಕ್ಷದಷ್ಟಿದೆ. ಇದು ಒಟ್ಟು ಸೋಂಕಿತರ ಶೇ.0.90ರಷ್ಟಾಗಿದೆ. ಕೊರೊನಾ ಟೆಸ್ಟ್‌ನಲ್ಲಿ ಪಾಸಿಟಿವ್ ದರ ಶೇ.1.90ರಷ್ಟಿದೆ. ವಾರದ ಪಾಸಿಟಿವ್ ದರ ಶೇ.1.98 ಆಗಿದೆ.

## ಮೀಸಲಾತಿ : ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ಸಂವಾದ

ಮಲೇಬೆನ್ನೂರು, ಸೆ.26- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಬರುವ ಅಕ್ಟೋಬರ್ 2, 3 ರಂದು ಜಾಗೃತಿ ಕಾರ್ಯಾಗಾರ ಮತ್ತು 4 ಕ್ಕೆ ಸಮಾಜದ ಸಚಿವರ, ಶಾಸಕರ, ಸಂಸದರ ಸಮ್ಮುಖದಲ್ಲಿ ಎಸ್ಟಿ ಮೀಸಲಾತಿ ಹೆಚ್ಚಳ ಕುರಿತು ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ತಿಳಿಸಿದ್ದಾರೆ.



ಕಾರ್ಯಾಗಾರ ಹಾಗೂ ಸಂವಾದದ ಅಂಗವಾಗಿ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಶನಿವಾರ ಕರೆದಿದ್ದ ಜಿಲ್ಲೆಯ ಸಮಾಜದ ಪ್ರಮುಖರ ಪೂರ್ವಭಾವಿ ಸಭೆಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಅಕ್ಟೋಬರ್ 2 ರ ಶನಿವಾರ ಬೆಳಿಗ್ಗೆ 10 ಗಂಟೆಗೆ ಮಹಾತ್ಮ ಗಾಂಧೀಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮೂಲಕ 2 ದಿನಗಳ ಜಾಗೃತಿ ಕಾರ್ಯಾಗಾರಕ್ಕೆ ಚಾಲನೆ ನೀಡಲಾಗುವುದು. ರಾಜ್ಯದ ಪ್ರತಿ ತಾಲ್ಲೂಕಿನಿಂದ ಸಮಾಜದ ಅಧ್ಯಕ್ಷರು, ವಾಲ್ಮೀಕಿ ಜಾತ್ರಾ ಸಮಿತಿ ಅಧ್ಯಕ್ಷರು, ಸಂಚಾಲಕರು, ನೌಕರರ ಸಂಘದ ಅಧ್ಯಕ್ಷರು ಸೇರಿದಂತೆ, ಕನಿಷ್ಠ 10 ಜನರಂತೆ ಒಟ್ಟು ಒಂದು ಸಾವಿರ ಜನರು ಕಾರ್ಯಾಗಾರಕ್ಕೆ ಆಹ್ವಾನಿತರಾಗಿರುತ್ತಾರೆ.

ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಸೇರಿದಂತೆ, ಇನ್ನೂ ಅನೇಕ ನುರಿತ ವ್ಯಕ್ತಿಗಳು ಮತ್ತು ಎಸ್ಟಿ ನಿರ್ದೇಶನಾಲಯದ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿಗಳು ಕಾರ್ಯಾಗಾರದಲ್ಲಿ ಮಾತನಾಡಲಿದ್ದಾರೆ ಎಂದು ಸ್ವಾಮೀಜಿ ಹೇಳಿದರು.

ಹೊರ ಜಿಲ್ಲೆಗಳಿಂದ ಆಗಮಿಸುವ ಎಲ್ಲರಿಗೂ ವಸತಿ ಹಾಗೂ ಊಟದ ವ್ಯವಸ್ಥೆ ಮಾಡಿದ್ದು, ಪ್ರತಿದಿನ ಬೆಳಿಗ್ಗೆ ಯೋಗ, ಶ್ರಮದಾನ ಇರುತ್ತದೆ. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅಕ್ಟೋಬರ್ 4 ರ ಸೋಮವಾರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ಸಾರಿಗೆ ಸಚಿವ ಶ್ರೀರಾಮುಲು ಸೇರಿದಂತೆ ಸಮಾಜದ ಶಾಸಕರ, ಸಂಸದರ ಸಮ್ಮುಖದಲ್ಲಿ ಎಸ್ಟಿ ಮೀಸಲಾತಿ ಹೆಚ್ಚಳ ವಿಚಾರ ವಿಳಂಬವಾಗುತ್ತಿರುವ ಬಗ್ಗೆ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ.

ಮಠದ ಆಡಳಿತಾಧಿಕಾರಿ ಟಿ. ಓಬಳಪ್ಪ, ವಾಲ್ಮೀಕಿ-ನಾಯಕ ಸಮಾಜದ ಜಿಲ್ಲಾಧ್ಯಕ್ಷ ಬಿ. ವೀರಣ್ಣ, ದಾವಣಗೆರೆ ತಾಲ್ಲೂಕು ಸಮಾಜದ ಅಧ್ಯಕ್ಷ ಹದಡಿ ಹಾಲಪ್ಪ, ಹೊನ್ನಾಳಿ ತಾ. ಗ್ರಾ. ಅಧ್ಯಕ್ಷ ತಿಮ್ಮೇನಹಳ್ಳಿ ಚಂದಪ್ಪ, ಹರಿಹರ ನಗರ ಅಧ್ಯಕ್ಷ ಕೆ.ಬಿ. ಮಂಜುನಾಥ್, ಹರಿಹರ ತಾ. ಗ್ರಾಮಾಂತರ ಅಧ್ಯಕ್ಷ ಜಿಗಳಿ ರಂಗಪ್ಪ, ಸಮಾಜದ ಮುಖಂಡರಾದ ಗುಮ್ಮನೂರು ಮಲ್ಲಿಕಾರ್ಜುನ್, ಕುರ್ಕಿ ಮುರುಗೇಂದ್ರಪ್ಪ, ಹರಿಹರದ ಹಂಚಿನ ನಾಗಣ್ಣ, ದಿನೇಶ್‌ಬಾಬು, ಮೆಣಸಿನಹಾಳ್ ಬಸವರಾಜ್, ಆಟೋ ಹನುಮಂತ, ರೈತ ಸಂಘದ ಬೇವಿನಹಳ್ಳಿ ಮಹೇಶ್, ಮಲ್ಲಾಪುರ ದೇವರಾಜ್, ಜಿಗಳಿಯ ಜಿ. ಆನಂದಪ್ಪ, ಕೆ.ಜಿ. ಬಸವರಾಜ್, ಪತ್ರಕರ್ತ ಜಿಗಳಿ ಪ್ರಕಾಶ್, ಕೊಕ್ಕನೂರಿನ ಕೆ.ಹೆಚ್. ಕೊಟ್ರಪ್ಪ, ಡಿ. ಸೋಮಶೇಖರ್, ಭಾನುವಳ್ಳಿ ಪುಟ್ಟಪ್ಪ, ಹನಗವಾಡಿ ಹನುಮಂತಪ್ಪ, ಮಂಗೇನಹಳ್ಳಿ ಲೋಹಿತ್, ಕೋಣನತಲೆ ನಾಗಪ್ಪ, ಅಣಜಿ ಅಂಜಿನಪ್ಪ, ಜಿಲ್ಲಾ ವಾಲ್ಮೀಕಿ ಮಹಿಳಾ ಅಧ್ಯಕ್ಷರಾದ ವಿಜಯಶ್ರೀ ಮಹೇಂದ್ರಕುಮಾರ್, ಹರಿಹರದ ಪಾರ್ವತಿ ಮತ್ತಿತರರು ಸಭೆಯಲ್ಲಿದ್ದರು.

## ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಬೇಕು



ದಾವಣಗೆರೆ, ಸೆ.26- ರಾಜ್ಯದಲ್ಲಿ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿರುವ ದಾಖಲೆ ರಹಿತ ಅನೇಕ ಕುಗ್ರಾಮಗಳಿವೆ. ಅಂತಹ ಗ್ರಾಮಗಳನ್ನು ದಾಖಲೆ ಗ್ರಾಮಗಳನ್ನಾಗಿ (ಕಂದಾಯ ಗ್ರಾಮಗಳು) ಪರಿವರ್ತಿಸಿ ಸರ್ಕಾರದಿಂದ ಸಿಗಬಹುದಾದ ಸವಲತ್ತುಗಳನ್ನು ನೀಡುವಂತೆ ಮಾಜಿ ಸಚಿವ ಕೆ.ಶಿವಮೂರ್ತಿನಾಯ್ಕ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾಜದ ಕಟ್ಟಕಡೆಯಲ್ಲಿರುವ ತಾಂಡಾಗಳು, ಹಾಡಿಗಳು, ಹಟ್ಟಿಗಳು ಮೂಲಸೌಲಭ್ಯಗಳಿಂದ ವಂಚಿತವಾಗಿವೆ. ಅವುಗಳನ್ನು ಗುರುತಿಸಿ, ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಸರ್ವೋಚ್ಛ ನ್ಯಾಯಾಲಯದ ಮೊರೆ ಹೋಗಲು ಸಿದ್ಧರಿದ್ದೇವೆ ಎಂದರು.

ಕರ್ನಾಟಕದಲ್ಲಿ ಜಾರಿಯಾಗಿರುವ ಕರ್ನಾಟಕ ಭೂ ಸುಧಾರಣಾ ಕಾಯ್ದೆಗೆ ರಾಷ್ಟ್ರಪತಿ ಅಂಕಿತ ದೊರೆತಿದ್ದು, ಇದನ್ನು ದೇಶ ವ್ಯಾಪಿ ಅನ್ವಯವಾಗುವಂತೆ ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರು ಸ್ವಯಂಪ್ರೇರಿತರಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಾಕಬೇಕೆಂದು ಮನವಿ ಮಾಡಿದರು.

ಈ ಬಗ್ಗೆ ನೀತಿ ಆಯೋಗದ ಅಧ್ಯಕ್ಷರಿಗೂ, ಲೋಕಸಭಾ ಅಧ್ಯಕ್ಷರಿಗೂ ಮನವಿ ಮಾಡಿಕೊಂಡಿದ್ದು, ಪ್ರಧಾನಿಗಳಿಗೂ ಸಹ ಹಲವು ಬಾರಿ ಮನವಿ ಮಾಡಿಕೊಂಡಿರುವುದಾಗಿ ಅವರು ತಿಳಿಸಿದರು.

ಲಂಬಾಣಿ ತಾಂಡಾಗಳ ಜನರ ಜೀವನ ಶೈಲಿ ಏಕರೂಪವಿದ್ದರೂ ಸಹ ಈ ಜನರನ್ನು ಸಮಾಜದ ಮುಖ್ಯವಾಹಿನಿಯಿಂದ ಏಕೆ ದೂರವಿಟ್ಟಿದ್ದೀರಿ? ನಾವೂ ದೇಶದ ಪ್ರಜೆಗಳಲ್ಲವೇ. ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸಿ, ಮೂಲ ಸೌಕರ್ಯಗಳನ್ನು ಕಲ್ಪಿಸಿ ಕೊಡುವಂತೆ ಆಗ್ರಹಿಸಿದರು.

## ಐಟಿಐ ಉಳಿಕೆ ಸೀಟುಗಳ ಪ್ರವೇಶಕ್ಕೆ ಅರ್ಜಿ

ದಾವಣಗೆರೆ, ಸೆ. 26- ನಗರದ ಸರ್ಕಾರಿ ಐಟಿಐ ಕಾಲೇಜಿನಲ್ಲಿ 2021-22 ನೇ ಶೈಕ್ಷಣಿಕ ಸಾಲಿನಲ್ಲಿ ಆನ್‌ಲೈನ್ ನಲ್ಲಿ ಭರ್ತಿಯಾದ ನಂತರ ಉಳಿದ ಸೀಟುಗಳಿಗೆ ಕ್ಯಾಜುಯಲ್ ರೌಂಡ್‌ನಲ್ಲಿ ಪ್ರವೇಶ ಪಡೆಯಲು ಅರ್ಜಿಯನ್ನು ಸಲ್ಲಿಸಲು ಮತ್ತು ಸ್ವೀಕರಿಸಲು ನಾಳೆ ದಿನಾಂಕ 27 ರಿಂದ 29 ರವರೆಗೆ ನಿಗದಿಪಡಿಸಲಾಗಿದೆ.

ಇಚ್ಛೆಯುಳ್ಳ ಅಭ್ಯರ್ಥಿಗಳು ಸರ್ಕಾರಿ ಐಟಿಐ ಕಾಲೇಜಿನಲ್ಲಿ ಕಚೇರಿ ವೇಳೆಯಲ್ಲಿ ಅರ್ಜಿಯನ್ನು ಸ್ವೀಕರಿಸಿ, ಸಲ್ಲಿಸಬಹುದು ಎಂದು ಪ್ರಾಚಾರ್ಯರು ತಿಳಿಸಿದ್ದಾರೆ.

## ಭಾರತ್ ಬಂದ್‌ಗೆ ಜಿಲ್ಲಾ ಕಿಸಾನ್ ಕಾಂಗ್ರೆಸ್ ಬೆಂಬಲ

ರೈತರಿಗೆ ಮರಣ ಶಾಸನವಾಗಿರುವ ಕೃಷಿ ಕಾಯಿದೆಗಳನ್ನು ರದ್ದುಪಡಿಸಬೇಕು, ಅಡುಗೆ ಅನಿಲ,



ಪೆಟ್ರೋಲ್ - ಡೀಸೆಲ್ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ, ಸಂಯುಕ್ತ ಕಿಸಾನ್ ಮೋರ್ಚಾ ಮತ್ತಿತರೆ ಸಂಘಟನೆಗಳ ನೇತೃತ್ವದಲ್ಲಿ ಇಂದು ಕರೆದಿರುವ ಭಾರತ್ ಬಂದ್‌ಗೆ ಜಿಲ್ಲಾ ಕಿಸಾನ್ ಕಾಂಗ್ರೆಸ್ ಬೆಂಬಲ ವ್ಯಕ್ತಪಡಿಸಿದೆ ಎಂದು ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜು ವಿ.ಶಿವಗಂಗಾ ತಿಳಿಸಿದ್ದಾರೆ.

ಜಿಲ್ಲಾ ಕಿಸಾನ್ ಕಾಂಗ್ರೆಸ್ ಪದಾಧಿಕಾರಿಗಳು, ಸಾರ್ವಜನಿಕರು ಬಂದ್‌ಗೆ ಸಹಕರಿಸಬೇಕೆಂದು ಬಸವರಾಜು ಕೋರಿದ್ದಾರೆ.

## ಬಸ್ ಮಾಲೀಕರಿಂದ ಬಾಹ್ಯ ಬೆಂಬಲ

ಭಾರತ್ ಬಂದ್‌ಗೆ ಜಿಲ್ಲಾ ಬಸ್ ಮಾಲೀಕರ ಸಂಘ ಬಾಹ್ಯ ಬೆಂಬಲ ಸೂಚಿಸಿದೆ. ಖಾಸಗಿ ಬಸ್‌ಗಳ ಸಂಚಾರ ಎಂದಿನಂತೆ ಇರುತ್ತದೆ ಎಂದು ಸಂಘದ ಅಧ್ಯಕ್ಷ ಮಂಜುನಾಥ್ ತಿಳಿಸಿದ್ದಾರೆ.

## ಬಂದ್‌ಗೆ ರೈತ ಒಕ್ಕೂಟ ಬೆಂಬಲವಿಲ್ಲ

ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿರುವ ಇಂದಿನ ಭಾರತ್ ಬಂದ್‌ಗೆ ಭಾರತೀಯ ರೈತ ಒಕ್ಕೂಟ ಬೆಂಬಲಿಸಿಲ್ಲ ಎಂದು ಜಿಲ್ಲಾಧ್ಯಕ್ಷ ಹೆಚ್.ಆರ್. ಲಿಂಗರಾಜ್ ಸ್ಪಷ್ಟಪಡಿಸಿದ್ದಾರೆ.


ಶಿವ || ಶ್ರೀಕಲ್ಲೇಶ್ವರ ಪ್ರಸನ್ನ || ಶಿವ

### ಕೈಲಾಸ ಶಿವಗಣಾರಾಧನೆ ಆಹ್ವಾನ

ದಾವಣಗೆರೆ ಸಿಟಿ, ಎಸ್.ಎಸ್. ಲೇಔಟ್, 3ನೇ ಮೇನ್, 3ನೇ ಕ್ರಾಸ್ 'ಬಿ' ಬ್ಲಾಕ್ ವಾಸಿಗಳಾದ
ಶ್ರೀಮತಿ ಸುನಂದಮ್ಮ ಲಿಂ|| ಶ್ರೀ ಶಿವಶಂಕರಪ್ಪ ಇವರ ಮಗನಾದ
**ಶ್ರೀ ಎಂ.ಎಸ್. ಶಿವಕುಮಾರ್**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 19.09.2021ನೇ ಭಾನುವಾರ ಮಧ್ಯಾಹ್ನ 2.38 ಕ್ಕೆ ನನ್ನ ಧರ್ಮಪತ್ನಿಯವರಾದ



ಜನನ : 12-07-1968
ನಿಧನ: 19-09-2021

**ಶ್ರೀಮತಿ ಸವಿತ**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ 27.09.2021ನೇ ಸೋಮವಾರ ಬೆಳಿಗ್ಗೆ 11 ಗಂಟೆಗೆ
ಶ್ರೀ ಚೌಡೇಶ್ವರಿ ಸಮುದಾಯ ಭವನ, ಐಟಿಐ, ಕಾಲೇಜ್ ಆವರಣ, ಹದಡಿ ರಸ್ತೆ, ದಾವಣಗೆರೆ
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
- ಶ್ರೀ ಮತಿ ಸುನಂದಮ್ಮ ಲಿಂ|| ಶ್ರೀ ಶಿವಶಂಕರಪ್ಪನವರು
- ಶ್ರೀ ಎಂ.ಎಸ್. ಶಿವಕುಮಾರ್ ಮತ್ತು ಮಕ್ಕಳು
- ಲೋಕಿಕೆರೆ ಕರೇಗೌಡ್ರ, ಶ್ರೀ ಜಯದೇವಪ್ಪ ಮತ್ತು ಸಹೋದರರು, ಸಹೋದರಿಯರು ಹಾಗೂ ಮಕ್ಕಳು ಮತ್ತು ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



|| ಶ್ರೀಶೈಲ ಮಲ್ಲಿಕಾರ್ಜುನ ಪ್ರಸನ್ನ ||

### ಪ್ರಥಮ ವರ್ಷದ ಪುಣ್ಯಸ್ಮರಣೆ



**ಎ.ಎಂ. ಮಲ್ಲಿಕಾರ್ಜುನಯ್ಯ**
ವೀರಶೈವ ಸಮಾಜದ ಮುಖಂಡರು,
ಬಿಇಒ ಕಚೇರಿಯ ನಿವೃತ್ತ ಪತ್ರಾಂಕಿತ ವ್ಯವಸ್ಥಾಪಕರು, ಹರಪನಹಳ್ಳಿ

*ಹಗಲು- ಇರುಳುಗಳು ಕಳೆದು ಮೂಡುತ್ತಿರುವ ಹೊಸತಿನಂತೆ ನೀವು ಕಣ್ಮರೆಯಾಗಿ ಹೋದರೂ, ನಿಮ್ಮ ನೆನಪು ನಮ್ಮೆಲ್ಲರ ಹೃದಯಗಳಲ್ಲಿ ಶಾಶ್ವತವಾಗಿ ಉಳಿದಿದೆ. ನಿಮ್ಮ ಪ್ರೀತಿ-ವಾತ್ಸಲ್ಯ, ಆದರ್ಶ, ಶಿಸ್ತು, ಪ್ರಾಮಾಣಿಕತೆ ಮತ್ತು ಶ್ರಮದ ಕಾಯಕತ್ವವು ನಮಗೆಲ್ಲಾ ಆದರ್ಶವಾಗಿವೆ. ನೀವು ತೋರಿಸಿದ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.*

ಧರ್ಮಪತ್ನಿ: ಶ್ರೀಮತಿ ಎ.ಎಂ. ವಿನೋದಮ್ಮ ಮಲ್ಲಿಕಾರ್ಜುನಯ್ಯ
ಮಕ್ಕಳಾದ: ಡಾ. ಎ.ಎಂ. ರೇಣುಕಾರಾಧ್ಯ ಶ್ರೀಮತಿ ಭಾರತಿ ರೇಣುಕಾರಾಧ್ಯ, ಶ್ರೀಮತಿ ರೋಹಿಣಿ ಜಗದೀಶ್ವರ ಸ್ವಾಮಿ. ಶ್ರೀಮತಿ ನಳಿನ ರುದ್ರಸ್ವಾಮಿ. ಹಾಗೂ ಅಳಿಯಂದಿರು. ಮೊಮ್ಮಕ್ಕಳು. ಅಪಾರ ಬಂಧು ಮಿತ್ರರು.
ಸದ್ಧರ್ಮ ನಿವಾಸ ಡೋರ್ ನಂ 1451/24 ಎಲ್.ಐ.ಸಿ ಕಾಲೋನಿ.1ನೇ ಮುಖ್ಯರಸ್ತೆ, 2ನೇ ತಿರುವು ದಾವಣಗೆರೆ ಹಾಗೂ ಹರಪನಹಳ್ಳಿ. ಮೊ: 9341776436


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte